ಸಂಪುಟ : 8 ಸಂಚಿಕೆ : 265 ಪುಟ : 4 ಬೆಲೆ : 3.00 ಗುರುವಾರ ನವ್ಹಂಬರ್ 30, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 265 Pages : 4 Price : 3.00 Thursday November 30, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 30 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ: ವಾರ್ಡ್ ನಂ. 24, 26,ರಲ್ಲಿ ಮಕಾನ್‌ಗಲ್ಲಿ, ಉಡಚಮ್ಮನಗುಡಿ, ಅಬ್ಬಿಗೇರಿ ಕಂಪೌಂಡ್ ಲೈನ್, ತೆಗ್ಗಿನ ಲಾಟ್, ಸಾಲಮನೆ ಲೈನ್, ಕಮ್ಮಾರ ಸಾಲ್, ಬನ್ನಿಕಟ್ಟಿ ಲೈನ್, ಹಳೆ ಡಿ.ಸಿ.ಆಫೀಸ್ ಲೈನ್, ಪೋಸ್ಟ್ ಆಫೀಸ್ ಲೈನ್, ಗ್ರೇನ್ ಮಾರ್ಕೆಟ್ ಲೈನ್, 76 ಪ್ಲಾಟ್, ಕೊರವರ ಓಣಿ,

ವಾರ್ಡ್ ನಂ. 29 ರಲ್ಲಿ ಪಾಪಡೆಯವರ ಲೈನ್, ನೆಲ್ಸನ್ ಮಂಡೆಲಾ ಲೈನ್, ವಾರ್ಡ್ ನಂ. 10ರಲ್ಲಿ ಮುಳಗುಂದರ ಲೈನ್, ಮಲ್ಲಿಕಾರ್ಜುನ ಗುಡಿ ಲೈನ್, ಕಲ್ಮನಿಯವರ ಲೈನ್, ಮಾನೇದ ಅವರ ಲೈನ್, ಗಣಾಚಾರಿ ಅವರ ಲೈನ್, ಭಾಗವಂಡಿಯವರ ಲೈನ್, ದೇವಧರ ಅವರ ಲೈನ್, ಕಬಾಡಿ ಲೈನ್, ಅಣ್ಣಿಗೇರಿಯವರ ಲೈನ್, ಮಾನೇದ ಅವರ ಲೈನ್, ದಿಬ್ಬದ ಲೈನ್, ಕುಲಕರ್ಣಿಗಲ್ಲಿ, ಅಂಬೇಡ್ಕರ ನಗರ, ಭಜಂತ್ರಿ ಓಣಿ,

ವಾರ್ಡ್ ನಂ. 07ರಲ್ಲಿ ಪುಲಿಕೇಶಿ ರಸ್ತೆ, ಪೋಸ್ಟ್ ಆಫೀಸ್ ಲೈನ್, ರಾಜೀವಪ್ಪನ ಶಾಲೆ, ವಾಲ್ಮೀಕಿ ನಗರ ಮುಳಗುಂದರ ಲೈನ್, ಪಟ್ಟಣಶೆಟ್ಟಿಯವರ ಲೈನ್, ವಾರ್ಡ್ ನಂ. 22ರಲ್ಲಿ ಗಂಗಿಮಡಿ ಕನ್ನಡ ಶಾಲೆ ದೊಡ್ಡ ಮಸೂತಿ ಲೈನ್, ಹಿಂದಿನ ಭಾಗ, ಮುಂದಿನ ಭಾಗ, 1400 ಮನೆ, 1200 ಮನೆ, 1600 ಮನೆ, 1800ಮನೆ 2000ಮನೆ ಲೈನ್‌ಗಳು, ವಾರ್ಡ್ ನಂ. 30, 35, 34ರಲ್ಲಿ ವಡ್ಡರಗೇರಿ ಮೂರಶಿಳ್ಳಿನ ವಕಾರ, ಕುಂಚಿಕೋರವರ ಓಣಿ, ರಾಣಿ ಚನ್ನಮ್ಮನ ಸರ್ಕಲ್, 1ನೇ ಕ್ರಾಸ್, ಶಿವಾನಂದ ಗಾರ್ಡನ್, ಡಿಪೋ ಹಿಂದಿನ ಭಾಗ, ಬಸವೇಶ್ವರ ಸ್ಕೂಲ್ ಮಸೂತಿ ಲೈನ್, ಹುಡ್ಕೋ ಕೆಲವು ಉಳಿದ ಭಾಗಗಳು.

ಕುಡಿಯುವ ನೀರಿನ ನಳ ಹೊಂದಿರುವ ನಾಗರಿಕರು ತಮ್ಮ ನೀರಿನ ಕರ ತುಂಬಿ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬರ ನಿರ್ವಹಣೆ, ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ.ಎಂ.ಎಲ್.

# ಎಫ್‌ಐಡಿ ಜೋಡಣೆ ಕುರಿತು ಜಾಗೃತಿ ಮೂಡಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಬರ ನಿರ್ವಹಣೆಯನ್ನು ಸಮರ್ಪಕವಾಗಿ ನಿಭಾಯಿಸುವುದರೊಂದಿಗೆ ಫ್ರೂಟ್ಸ್ ತಂತ್ರಾಂಶದ ಕುರಿತು ರೈತರಲ್ಲಿ ಜಾಗೃತಿ ಮೂಡಿಸಿ, ಶೀಘ್ರವೇ ರೈತರ ಜಮೀನುಗಳ ವಿವರ ಜೋಡಣೆಗೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜರುಗಿದ ಬರ ನಿರ್ವಹಣೆ ಹಾಗೂ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬರ ನಿರ್ವಹಣೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಕಾರ್ಯ ನಿರ್ವಹಿಸಬೇಕು. ಜಿಲ್ಲೆಯಲ್ಲಿ ಸದ್ಯ ಕುಡಿಯುವ ನೀರಿನ ತೊಂದರೆ ಇಲ್ಲ. ಆದರೂ ಕುಡಿಯುವ ನೀರಿನ ತೊಂದರೆಗೊಳಗಾಗಬಹುದಾದ ಗ್ರಾಮಗಳನ್ನು ಗುರುತಿಸಬೇಕು. ಯಾವುದೇ ಕಾರಣಕ್ಕೂ ಜಿಲ್ಲೆಯ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಆಗದಂತೆ ನಿಗಾ ವಹಿಸಬೇಕು. ಅಗತ್ಯ ಬಿದ್ದಲ್ಲಿ ಟ್ಯಾಂಕರ್ ಹಾಗೂ ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಿ, ಸರ್ಕಾರದ ಮಾರ್ಗಸೂಚಿಗಳನ್ವಯ ಬಳಸಿಕೊಳ್ಳಲು ಸಿದ್ಧತೆಗಳನ್ನು ಮಾಡಿಟ್ಟುಕೊಳ್ಳಬೇಕು. ಜಾನುವಾರುಗಳಿಗೆ ಮೇವಿನ ಕೊರತೆ ಆಗದಂತೆ ಮೇವು ಬ್ಯಾಂಕ್‌ಗಳಲ್ಲಿ ಸಮರ್ಪಕ ಮೇವಿನ ದಾಸ್ತಾನು ಮಾಡಿಟ್ಟುಕೊಳ್ಳುವಂತೆ ತಿಳಿಸಿದರು.



ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವು ಅಚ್ಚುಕಟ್ಟಾಗಿ ಜರುಗಬೇಕು. ಜಿಲ್ಲೆಯ 18 ವರ್ಷ ಪೂರ್ಣಗೊಳಿಸಿದ ಪ್ರತಿಯೊಬ್ಬ ಅರ್ಹ ಯುವ ಮತದಾರರು ಮತದಾರರ ಪಟ್ಟಿ ಸೇರ್ಪಡಗೆ ಅಗತ್ಯ ಕ್ರಮ ಜರುಗಿಸಬೇಕು. ಜಿಲ್ಲೆಯ ಎಲ್ಲ ಕಾಲೇಜುಗಳಿಗೆ ಸಂಬಂಧಿಸಿದ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ, ಯುವ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡಗೊಳಿಸಲು ಮುಂದಾಗುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಸೂಚನೆ ನೀಡಿದರು.

ರೈತರು ಸರಕಾರದ ಸೌಲಭ್ಯಗಳು ಹಾಗೂ ಸಹಾಯಧನ ಪಡೆಯಲು ರೈತರಿಗೆ ಸಂಬಂಧಪಟ್ಟ ಎಲ್ಲಾ ಜಮೀನುಗಳನ್ನು (ಫ್ರೂಟ್ಸ್ ತಂತ್ರಾಂಶ) ಎಫ್.ಐ.ಡಿ ಗೆ ಕಡ್ಡಾಯವಾಗಿ ಜೋಡಣೆ ಮಾಡಿಸಬೇಕಾಗಿದೆ. ಎಫ್.ಐ.ಡಿ. ಜೋಡಣೆಯಲ್ಲಿ ಜಿಲ್ಲೆಯ ಪ್ರಗತಿ ಉತ್ತಮವಾಗಿದ್ದು, ಜಿಲ್ಲೆಯ ಬಾಕಿ ಉಳಿದ ಎಲ್ಲ ರೈತರೂ ಫ್ರೂಟ್ಸ್ ತಂತ್ರಾಂಶದಲ್ಲಿ ತಮ್ಮ ಜಮೀನುಗಳ ವಿವರಗಳ ಜೋಡಣೆ ಕಾರ್ಯವನ್ನು ಶೀಘ್ರವೇ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು.


ವಿವಿಧ ಇಲಾಖೆಗಳ ಪ್ರಗತಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ವಿವಿಧ ಇಲಾಖೆಗಳಿಂದ ಅನುಮೋದನೆ ಪಡೆದ ಕಾಮಗಾರಿಗಳನ್ನು ಶೀಘ್ರವೇ ಪ್ರಾರಂಭಿಸಿ ಕಾಲಮಿತಿಯೊಳಗೆ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಇಲಾಖೆಗಳಿಂದ ಒದಗಿಸಲಾಗುವ ಸಹಾಯಧನವನ್ನು ಫಲಾನುಭವಿಗಳಿಗೆ ಕಾಲಮಿತಿಯೊಳಗೆ ವಿತರಿಸಬೇಕು. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಜರುಗಿಸಿ ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ನಿಗಾವಹಿಸಬೇಕು.

▸▸3 ನೇ ಪುಟಕ್ಕೆ

ಈಗಾಗಲೇ ಅನುಮೋದನೆಗೊಂಡ ಕಾಮಗಾರಿಗಳು ಹಾಗೂ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ ಕಾರ್ಯವನ್ನು ಡಿಸೆಂಬರ್ ಅಂತ್ಯದೊಳಗಾಗಿ ಪೂರ್ಣಗೊಳಿಸಬೇಕು. ಈ ಕಾರ್ಯದಲ್ಲಿ ವಿಳಂಬ ಧೋರಣೆ ಅಥವಾ ಉದಾಸೀನತೆ ತೋರಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವದು. ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ.

– ವೈಶಾಲಿ ಎಂ.ಎಲ್.
ಗದಗ ಜಿಲ್ಲಾಧಿಕಾರಿಗಳು.

## ಬಸ್, ಬೈಕ್ ನಡುವೆ ಮುಖಾಮುಖಿ ಡಿಕ್ಕಿ: ಬೈಕ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಸಾವು






■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸಾರಿಗೆ ಬಸ್ ಹಾಗೂ ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಬುಧವಾರ ಸಂಜೆ ಜರುಗಿದೆ.

ಇಲ್ಲಿನ ಗಜೇಂದ್ರಗಡ- ಕುಷ್ಟಗಿ ರಸ್ತೆಯಲ್ಲಿ ಈ ದುರ್ಘಟನೆ ಜರುಗಿದ್ದು, ಬೈಕ್‌ನಲ್ಲಿ ಹೊರಟಿದ್ದ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಕಲಾಲಬಂಡಿ ನಿವಾಸಿಗಳಾದ ಹಸನ್‌ಸಾಬ್,(30) ದಾವಲ್‌ಸಾಬ್(28) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸಿಂಧನೂರನಿಂದ ಗಜೇಂದ್ರಗಡಕ್ಕೆ ಬರುತ್ತಿದ್ದ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಈ ಘಟನೆ ಜರುಗಿದೆ.

ಘಟನಾ ಸ್ಥಳಕ್ಕೆ ಗಜೇಂದ್ರಗಡ ಪೊಲೀಸರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗಜೇಂದ್ರಗಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಪ್ರಕರಣ ನಡೆದಿದೆ.

### 536ನೇ ಶ್ರೀ ಕನಕ ಜಯಂತ್ಯುತ್ಸವ, ಭಾವೈಕ್ಯ ಸಮ್ಮೇಳನದಲ್ಲಿ ಸಿಎಂ ಸಿದ್ದರಾಮಯ್ಯ

# ಕಾಗಿನೆಲೆ ಪೀಠ ಶೋಷಿತ ಜಾತಿ-ಸಮುದಾಯಗಳ ನೆಲೆ

■ವಿಜಯಸಾಕ್ಷಿ ಸುದ್ದಿ, ಹಾವೇರಿ

ಹಿಂದಿನ ಜನ್ಮ-ಮುಂದಿನ ಜನ್ಮ ಎನ್ನುವುದೇ ಇಲ್ಲ. ಈ ಜನ್ಮದಲ್ಲಿ ನಾವು ಮಾಡುವ ಕೆಲಸಗಳೇ ಮುಖ್ಯ. ಈ ಕಾರಣಕ್ಕೆ ಬಸವಾದಿ ಶರಣರು ಮತ್ತು ಕನಕದಾಸರು ಕರ್ಮ ಸಿದ್ಧಾಂತ ಮತ್ತು ಜನ್ಮದ ಮೌಢ್ಯವನ್ನು ಸಾರಾಸಗಟಾಗಿ ತಿರಸ್ಕರಿಸಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಶ್ರೀಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಆಯೋಜಿಸಿದ್ದ 536ನೇ ಶ್ರೀ ಕನಕ ಜಯಂತ್ಯುತ್ಸವ ಮತ್ತು ಭಾವೈಕ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಗಿನೆಲೆ ಪೀಠ ಎಂದಿಗೂ ಒಂದು ಜಾತಿಯ ನೆಲೆ ಆಗಬಾರದು. ಇದು ಎಲ್ಲಾ ಶೋಷಿತ ಸಮುದಾಯಗಳ ನೆಲೆ ಆಗಬೇಕು. ಕನಕ ಜಯಂತಿ ಪ್ರಯುಕ್ತ ಭಾವೈಕ್ಯತಾ ಸಮಾವೇಶ ಏರ್ಪಡಿಸಿರುವ ಶ್ರೀ ಮಠದ ಗುರುಗಳಿಗೆ ಹೃದಯಪೂರ್ವಕವಾಗಿ ವಂದಿಸುತ್ತೇನೆ. ಇದು ಅತ್ಯಂತ ಅರ್ಥಪೂರ್ಣ ಕಾರ್ಯಕ್ರಮ ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ಇದೇ ಸಂದರ್ಭದಲ್ಲಿ ಮಲ್ಲೇಶಪ್ಪ ಹೊರಪೇಟೆ ಅವರ 'ಕನಕನ ಹೆಜ್ಜೆ' ಮಕ್ಕಳ ಕಾದಂಬರಿಯನ್ನು ಮುಖ್ಯಮಂತ್ರಿಗಳು ಬಿಡುಗಡೆಗೊಳಿಸಿದರು. ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ರೇವಣಸಿದ್ದೇಶ್ವರ, ಶ್ರೀ ಬೀರಲಿಂಗೇಶ್ವರ, ಶ್ರೀ ಮೈಲಾರಲಿಂಗೇಶ್ವರ, ಶ್ರೀ ಮಹಾಸಿದ್ದೇಶ್ವರಿ ದೇವರುಗಳ ಕುಂಭಾಭಿಷೇಕ ನೆರವೇರಿಸಿದರು.



ಹುಬ್ಬಳ್ಳಿ, ಮೂರುಸಾವಿರ ಮಠದ ಶ್ರೀಮನ್ ಮಹಾರಾಜ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು, ಹಜರತ್ ಬೀಜಾಪುರದ ಹಾಶಿಮ್ ಪೀರ್ ದರ್ಗಾದ ಸೈಯ್ಯದ್ ಮೊಹಮ್ಮದ್ ತನ್ವೀರ್ ಹಾಶ್ಮಿ, ಕರ್ನಾಟಕ ಧರ್ಮಪ್ರಾಂತ್ಯದ ಧರ್ಮಗುರು ಡಾ. ಫಾ.ಅಲ್ಫೋನ್ಸ್ ಫರ್ನಾಂಡಿಸ್ ಯೇಸ ಅವರು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ, ಮಾಜಿ ಸಚಿವ ಹೆಚ್.ಎಂ. ರೇವಣ್ಣ, ಹೊಸದುರ್ಗ ಶಾಸಕ ಬಿ.ಜಿ. ಗೋವಿಂದಪ್ಪ, ಹಿರೇಕೆರೂರು ಶಾಸಕ ಯು.ಬಿ. ಬಣಕಾರ್, ರಾಣೆಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ, ಹಾನಗಲ್ ಶಾಸಕ ಶ್ರೀನಿವಾಸ್ ಮಾನೆ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ನಾವ್ಯಾರೂ ಅರ್ಜಿ ಹಾಕೊಂಡು ಜಾತಿ-ಧರ್ಮ ಆರಿಸಿಕೊಂಡು ಹುಟ್ಟಿಲ್ಲ. ಮೊದಲು ಮನುಷ್ಯರು ಮನುಷ್ಯರನ್ನು ಪ್ರೀತಿಸಬೇಕು. ಜಾತಿ-ಧರ್ಮ ರಹಿತ ಮನುಷ್ಯ ಪ್ರೇಮವನ್ನೇ ಕನಕದಾಸರು ಜಗತ್ತಿಗೆ ನೀಡಿದರು. ಕನಕಗುರು ಪೀಠ ಸ್ಥಾಪಿಸುವಾಗ ಇದನ್ನು ಕುರುಬರ ಮಠ ಆಗಬೇಕು ಎಂದು ಬಯಸಲಿಲ್ಲ. ಎಲ್ಲಾ ಶೋಷಿತ ಧರ್ಮಗಳ ಮಠ ಆಗಬೇಕು ಎನ್ನುವುದು ಉದ್ದೇಶವಾಗಿತ್ತು ಎಂದು ಮುಖ್ಯಮಂತ್ರಿಗಳು ನೆನೆದರು.

## ಪ್ರಪಂಚದಲ್ಲಿ ಯಾವುದೂ ಶ್ರೇಷ್ಠ-ಕನಿಷ್ಠವೆಂದಿಲ್ಲ



■ವಿಜಯಸಾಕ್ಷಿ ಸುದ್ದಿ, ಗದಗ

ಈ ನಾಡಿನ ಶರಣ ಪರಂಪರೆಯಲ್ಲಿ ಅಲ್ಲಮಪ್ರಭುಗಳ ಕೀರ್ತಿ ಬಹು ದೊಡ್ಡದು ಎಂದು ಕೊಪ್ಪಳದ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ನುಡಿದರು.

ಡಂಬಳ ಗ್ರಾಮದಲ್ಲಿ ಜರುಗಿದ ಕೊಪ್ಪಳ ಗವಿಮಠದ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳ ಸದ್ಭಾವನಾ ಪಾದಯಾತ್ರೆಯ ಸಭಾ ಕಾರ್ಯಕ್ರಮದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಗಿಡವೊಂದರ ಹೂವು ಹೇಳಿತು, ನಾನೇ ಶ್ರೇಷ್ಠ. ದೇವರ ಶಿರದ ಮೇಲೇರುವುದಲ್ಲದೆ, ಸ್ವಾಮೀಜಿಗಳ ಪಾದ ಸ್ಪರ್ಶಿಸುವ ಭಾಗ್ಯ ನನಗಿದೆ ಎಂದು. ಅದೇ ಗಿಡದ ಬೇರು ಹೇಳಿತು, ನಾಳೆಯಿಂದ ನೀರು ಪೂರೈಕೆಯನ್ನೇ ಮಾಡದಿದ್ದರೆ ನಿನ್ನ ಕಥೆಯೇನು ಎಂದು. ಅಂದರೆ, ಈ ಪ್ರಪಂಚದಲ್ಲಿ ಯಾವುದೂ ಶ್ರೇಷ್ಠ, ಕನಿಷ್ಠ ಎಂಬುದಿಲ್ಲ. ಈ ವಿಚಾರವನ್ನು ಪ್ರತಿಯೊಬ್ಬರೂ ಅರಿಯಬೇಕೆಂದರು.

ಕಾರ್ಯಕ್ರಮದಲ್ಲಿ ಹೂವಿನ 'ಹಡಗಲಿಯ ಹಿರೇಶಾಂತವೀರ ಶ್ರೀ, ಹೊಸಳ್ಳಿಯ ಬೂದೀಶ್ವರ ಶ್ರೀ, ಹರ್ಲಾಪೂರದ ಕೊಟ್ಟೂರೇಶ್ವರ ಶ್ರೀ, ಡಿ.ಆರ್. ಪಾಟೀಲ್, ಮಿಥುನ ಜಿ.ಪಾಟೀಲ್, ಶಿವಾನಂದ ಪಟ್ಟಣಶೆಟ್ಟರ, ಜಿ.ವಿ. ಹಿರೇಮಠ, ಶಿವಲೀಲಾ ಬಂಡಿಹಾಳ, ಪ್ರವಚನ ವ್ಯವಸ್ಥಾಪಕ ಸಂಗಪ್ಪ ಗಡಗಿ, ಕೆ.ಬಿ. ಕಂಬಳಿ, ವಿ.ಎಸ್. ಯರಾಶಿ, ಬಿ.ಎಸ್. ಬಂಡಿ, ಬಸುರಡ್ಡಿ ಬಂಡಿಹಾಳ, ಕೆ.ಕೆ. ಬಂಡಿ, ಮಹೇಶ ಗಡಗಿ, ಆರ್.ಜಿ. ಕೊರ್ಲಹಳ್ಳಿ, ಮುತ್ತಣ್ಣ ಕೊಂತಿಕಲ್ಲ, ಮಂಜುನಾಥ ಸಂಜೀವಣ್ಣವರ, ಶಂಕ್ರಪ್ಪ ಗಡಗಿ, ಬಶೀರಹಮ್ಮದ ತಾಂಬೋಟಿ, ಗ್ರಾ.ಪಂ ಸರ್ವ ಸದಸ್ಯರು, ಸಿಬ್ಬಂದಿ ವರ್ಗದವರು ಸೇರಿದಂತೆ ಸಾವಿರಾರು ಭಕ್ತರು ಇದ್ದರು.

### 'ಮಹಿಳಾ ಸಬಲೀಕರಣ' ಕುರಿತು ಉಪನ್ಯಾಸ ನೀಡಿದ ಡಾ. ವಿಠ್ಠಲ ಕೋಳಿ

# ಮಹಿಳೆಯರ ಶಿಕ್ಷಣಕ್ಕೆ ಪ್ರೋತ್ಸಾಹ ಅಗತ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಹೆಣ್ಣು ಮಗುವಿನ ಸುರಕ್ಷತೆ ಮತ್ತು ಶಿಕ್ಷಣದ ಬಗ್ಗೆ ಪ್ರತಿಯೊಬ್ಬರೂ ಯೋಚಿಸಬೇಕು. ಹೆಣ್ಣು ಭ್ರೂಣಹತ್ಯೆ, ವರದಕ್ಷಿಣೆ, ಬಾಲ್ಯವಿವಾಹ, ಅತ್ಯಾಚಾರ, ಅದರಲ್ಲೂ ಅಪ್ರಾಪ್ತ ಬಾಲಕಿಯರ ಮೇಲಿನ ಅತ್ಯಾಚಾರ, ಬಡತನ, ಅನಕ್ಷರತೆ, ಲಿಂಗತಾರತಮ್ಯ, ಅಪೌಷ್ಟಿಕತೆ ಮುಂತಾದ ಸಮಸ್ಯೆಗಳಿಂದ ಹೆಣ್ಣು ಬಳಲುತ್ತಿದ್ದಾಳೆ. ಇಂದಿನ ಆಧುನಿಕ ಯುಗದಲ್ಲೂ ಹೆಣ್ಣು ಮಗುವನ್ನು ಅಭದ್ರತೆ ಕಾಡುತ್ತಿದೆ ಎಂದರೆ ಸಮಾಜ ಇನ್ನೂ ಹಿಂದುಳಿದಿದೆ ಎಂದೇ ಅರ್ಥ ಎಂದು ಕೆಎಲ್‌ಇ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಹಾಗೂ ಎನ್‌ಎಸ್‌ಎಸ್ ಯೋಜನಾಧಿಕಾರಿ ಡಾ. ವಿಠ್ಠಲ ಕೋಳಿ ಹೇಳಿದರು.

ಸಮೀಪದ ಹಾತಲಗೇರಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಕೆಎಲ್‌ಇ ಸಂಸ್ಥೆಯ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯ ಮತ್ತು ಗ್ರಾಮ ಪಂಚಾಯಿತಿ ಇವರ ಸಂಯುಕ್ತಾಶ್ರಯದಲ್ಲಿ 3ನೇ ದಿನದ 'ರಾಷ್ಟ್ರೀಯ ಸೇವಾ ಯೋಜನೆ' ಕಾರ್ಯಕ್ರಮದಲ್ಲಿ ಅವರು 'ಮಹಿಳಾ ಸಬಲೀಕರಣ' ಕುರಿತು ಉಪನ್ಯಾಸ ನೀಡಿದರು.



ಪ್ರಸವ ಪೂರ್ವ ಲಿಂಗಪತ್ತೆ ಸಂಪೂರ್ಣವಾಗಿ ನಿಷೇಧ, ಹೆಣ್ಣು ಮಕ್ಕಳ ಬಾಲ್ಯ ವಿವಾಹ ಪದ್ಧತಿಗೆ ನಿರ್ಬಂಧ, ಗರ್ಭಿಣಿಯರಿಗೆ ಪ್ರಸವ ಪೂರ್ವ ಆರೋಗ್ಯ ಸೇವೆಯ ಸೌಲಭ್ಯ, ಸರಕಾರದಿಂದ ಹೆಣ್ಣು ಮಗು ರಕ್ಷಿಸಿ ಯೋಜನೆ, 14 ವರ್ಷಗಳವರೆಗಿನ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ, ಸ್ಥಳೀಯ ಸರಕಾರಿ ಸಂಸ್ಥೆಗಳಲ್ಲಿ ಮಹಿಳೆಯರಿಗೆ 1/3ರಷ್ಟು ಮೀಸಲು, ಸತಿ ವಿರೋಧಿ, ವರದಕ್ಷಿಣೆ ವಿರೋಧಿ ಕಾನೂನುಗಳು, ಎಸ್ಸಿ-ಎಸ್ಟಿ ವರ್ಗದ ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಮುಂತಾದ ಕಾನೂನುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರು ಸೇರ್ಪಡೆ ಕುರಿತು ನಾಟಕ ಪ್ರದರ್ಶಿಸಿದರು. ಗ್ರಾ.ಪಂ ಸದಸ್ಯೆ ಭೀಮವ್ವ ಲಕ್ಕಣ್ಣವರ, ಸದಸ್ಯ ಈರಪ್ಪ ಬೇಲೇರಿ, ಹನುಮಂತಗೌಡ ಪಾಟೀಲ, ಎಸ್.ಡಿ.ಎಂ.ಸಿ ಅಧ್ಯಕ್ಷ ಜಿ.ಎಸ್. ಪೂಜಾರ, ಉಪಾಧ್ಯಕ್ಷ ಎಸ್.ಎಂ. ಬಾರಕೇರ, ದೈಹಿಕ ಶಿಕ್ಷಕ ಕೆ.ಎಸ್. ಸ್ವಂಟಿ, ಶಿಕ್ಷಕ ಹೆಚ್.ಡಿ. ಕುರಿ, ಕಾನೂನು ಮಹಾವಿದ್ಯಾಲಯದ ಉಪನ್ಯಾಸಕಿ ಡಾ. ಜ್ಯೋತಿ ಸಿ.ವಿ, ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿ ಡಾ. ಸಿ.ಬಿ. ರಣಗಟ್ಟಿಮಠ ಮುಂತಾದವರಿದ್ದರು.

ಪ್ರಸವ ಪೂರ್ವ ಲಿಂಗಪತ್ತೆ ಸಂಪೂರ್ಣವಾಗಿ ನಿಷೇಧ, ಹೆಣ್ಣು ಮಕ್ಕಳ ಬಾಲ್ಯ ವಿವಾಹ ಪದ್ಧತಿಗೆ ನಿರ್ಬಂಧ, ಗರ್ಭಿಣಿಯರಿಗೆ ಪ್ರಸವ ಪೂರ್ವ ಆರೋಗ್ಯ ಸೇವೆಯ ಸೌಲಭ್ಯ, ಸರಕಾರದಿಂದ ಹೆಣ್ಣು ಮಗು ರಕ್ಷಿಸಿ ಯೋಜನೆ, 14 ವರ್ಷಗಳವರೆಗಿನ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ, ಸ್ಥಳೀಯ ಸರಕಾರಿ ಸಂಸ್ಥೆಗಳಲ್ಲಿ ಮಹಿಳೆಯರಿಗೆ 1/3ರಷ್ಟು ಮೀಸಲು, ಸತಿ ವಿರೋಧಿ, ವರದಕ್ಷಿಣೆ ವಿರೋಧಿ ಕಾನೂನುಗಳು, ಎಸ್ಸಿ-ಎಸ್ಟಿ ವರ್ಗದ ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಮುಂತಾದ ಕಾನೂನುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಡಾ. ವಿಠ್ಠಲ ಕೋಳಿ ತಿಳಿಸಿದರು.

## ಸಂಪಾದಕೀಯ

# ವಿವಾದಗಳನ್ನು ತಂದುಕೊಂಡ ಬಿಹಾರ್ ಸಿಎಂ

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಹಬ್ಬಗಳಿಗೆ ನೀಡುವ ವಿಚಾರವಾಗಿ ತೆಗೆದುಕೊಂಡ ನಿರ್ಧಾರಗಳು ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ನಿತೀಶ ಕುಮಾರ್ ಹಿಂದೂ ಹಬ್ಬಗಳಿಗೆ ನೀಡಲಾಗಿದ್ದ ಕೆಲ ರಜೆಗಳನ್ನು ಕಡಿತಗೊಳಿಸಿದ್ದಾರೆ. ಮುಸ್ಲಿಂ ಹಬ್ಬಗಳಿಗೆ ರಜೆಯನ್ನ ವಿಸ್ತರಣೆ ಮಾಡಿ ಒಂದು ಸಮುದಾಯದ ಜನರ ಕಂಗಣ್ಣಿಗೆ ಗುರಿಯಾಗಿದೆ. ಜೊತೆಗೆ ಶಿಕ್ಷಕರ ಬೇಸಿಗೆ ರಜೆಯನ್ನು ಕಡಿಮೆ ಮಾಡಿರುವುದು ಶಿಕ್ಷಕ ಸಮುದಾಯದ ಆಕ್ರೋಶಕ್ಕೂ ಕಾರಣವಾಗಿದೆ.

ಆಡಳಿತಾತ್ಮಕ ದೃಷ್ಟಿಯಿಂದ ಸರ್ಕಾರ ಶಿಕ್ಷಕರ ರಜೆಯನ್ನು ಕಡಿತಗೊಳಿಸಿರುವುದನ್ನು ಕೆಲ ಸಂದರ್ಭದಲ್ಲಿ ಒಪ್ಪಬಹುದು. ಆದರೆ ಏಕಾಏಕಿ ಇಂತಹ ನಿರ್ಧಾರ ಕೈಗೊಳ್ಳುವ ಮುನ್ನ ಶಿಕ್ಷಕ ಸಮುದಾಯದ ಸಲಹೆ ಪಡೆಯುವುದು ಅಗತ್ಯವಾಗಿತ್ತು.

ಆದರೆ ಮುಸ್ಲಿಂ ಸಮುದಾಯದ ಹಬ್ಬಗಳಿಗೆ ರಜೆಯನ್ನ ಹೆಚ್ಚಳ ಮಾಡಿರುವುದು ವಿವಾದಕ್ಕೆ ಕಾರಣವಾಗಿದೆ. ಮುಸ್ಲಿಂ ಮುಖಂಡರಾಗಲಿ ಅಥವಾ ಮುಸ್ಲಿಂ ಸಮುದಾಯದ ಶಾಸಕರಾಗಲಿ ಹಬ್ಬಗಳಿಗೆ ಹೆಚ್ಚು ರಜೆ ಕೊಡುವಂತೆ ಒಮ್ಮೆಯೂ ಕೋರಿಕೆಯನ್ನ ಸಲ್ಲಿಸಿಲ್ಲ. ಆದಾಗಿಯೂ ಬಿಹಾರ್ ಸಿಎಂ ಇಂತಹದೊಂದು ನಿರ್ಧಾರ ಕೈಗೊಂಡಿರುವುದು ಬಹುಸಂಖ್ಯಾತರ ಕಂಗೆಣ್ಣಿಗೆ ಗುರಿಯಾಗಿದೆ.

ಬಿಹಾರದ ಮುಖ್ಯಮಂತ್ರಿ ಆಗಿರುವ ನಿತೀಶ್ ಕುಮಾರ್, ಎಲ್ಲ ವರ್ಗದವರನ್ನು ಸಮಾನವಾಗಿ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು. ನಿರ್ದಿಷ್ಟ ಸಮುದಾಯಕ್ಕೆ ಸೌಲಭ್ಯ ಅಥವಾ ರಜೆ ವಿಸ್ತರಣೆ ಮಾಡುವುದು ತಪ್ಪಲ್ಲ. ಆದರೆ ಈಗಾಗಲೇ ಇನ್ನಿತರ ಹಬ್ಬಗಳಿಗೆ ಪಡೆಯಲಾಗುತ್ತಿದ್ದ ರಜೆಯನ್ನು ಕಡಿತಗೊಳಿಸಿರುವುದು ಬಹುದೊಡ್ಡ ತಪ್ಪು. ಇದರಿಂದ ಒಂದು ನಿರ್ದಿಷ್ಟ ಸಮುದಾಯದ ಸಾಮಾನ್ಯ ಜನರಿಗೆ ಘಾಸಿ ಉಂಟಾಗುತ್ತದೆ ಎನ್ನುವ ಕನಿಷ್ಠ ಚಿಂತನೆ ಇಲ್ಲದಿರುವುದು ಸೋಜಿಗ.

ಸರಕಾರಿ ರಜೆ ವಿಷಯದಲ್ಲಿ ಸರ್ಕಾರ ಒಂದಷ್ಟು ಗಮನಹರಿಸಬೇಕು. ರಾಷ್ಟ್ರೀಯ ಹಬ್ಬಗಳು, ಧಾರ್ಮಿಕ ಹಬ್ಬಗಳು, ದಸರಾ ರಜೆ, ಬೇಸಿಗೆ ರಜೆ ಜೊತೆಗೆ ಸರ್ಕಾರಿ ನೌಕರರಿಗೆ ವರ್ಷಕ್ಕೆ ಇಂತಿಷ್ಟು ದಿನಗಳ ರಜೆ ಸೌಲಭ್ಯಗಳಿವೆ. ಈ ರಜೆಗಳನ್ನೆಲ್ಲ ಲೆಕ್ಕ ಹಾಕಿದಲ್ಲಿ ವರ್ಷಕ್ಕೆ ನೂರಕ್ಕಿಂತ ಹೆಚ್ಚು ದಿನಗಳು ರಜೆಯಲ್ಲಿಯೇ ಕಳೆದು ಹೋಗುತ್ತವೆ.

ದೇಶಾದ್ಯಂತ ರಜೆ ಕಡಿತುಗೊಳಿಸಿ ಕೆಲಸ ಮಾಡಬೇಕು ಎನ್ನುವ ಮನಸ್ಥಿತಿ ಬೆಳೆಯುತ್ತಿರುವ ಇಂತಹ ಸಂದರ್ಭದಲ್ಲಿ, ಬಿಹಾರ್ ಸಿಎಂ ಅನಗತ್ಯವಾಗಿ ರಜೆ ವಿಷಯಕ್ಕೆ ಕೈಹಾಕಿ ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ.

# ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ನರಗುಂದ ಪಟ್ಟಣದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಪ್ರಸಕ್ತ ಸಾಲಿನ ಎಸ್.ಎಫ್.ಸಿ. ಹಾಗೂ ಪುರಸಭೆ ಅನುದಾನದ ಶೇ 5 % ರಡಿ ವಿಶೇಷ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ವ್ಯಕ್ತಿಗತ ಚಟುವಟಿಕೆಯಲ್ಲಿ ಅನುದಾನ ಮೀಸಲಿರಿಸಿ ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿಗಳ ಅನುಮೋದನೆಯನ್ವಯ ವಿಕಲಚೇತನರಿಗೆ ನಿಯಮಾನುಸಾರ ಸ್ವಯಂ ಉದ್ಯೋಗಕ್ಕೆ ಸಹಾಯಧನ ನೀಡುವುದು ಮತ್ತು ವಿಕಲಚೇತನರಿಗೆ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಸಹಾಯಧನ ನೀಡುವ ಕುರಿತು ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ದಾಖಲೆಗಳೊಂದಿಗೆ ನರಗುಂದ ಪುರಸಭೆಯ ಡೇ ನಲ್ಮ ವಿಭಾಗದಲ್ಲಿ ಡಿಸೆಂಬರ್ 15 ರೊಳಗಾಗಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನರಗುಂದ ಪುರಸಭೆಯ ಡೇ ನಲ್ಮ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

ಇಂದು 'ಕನಕ ಜಯಂತಿ' ನಿಮಿತ್ತ ಲೇಖನ

# ಕುಲ ಕುಲ ಕುಲವೆಂದು ಹೊಡೆದಾಡದಿರಿ...

ಕನಕದಾಸರು ಹೆಸರಿಗೆ ತಕ್ಕಂತೆ ಪುಟವಿಟ್ಟ ಚಿನ್ನ. ಧರ್ಮಾಭಿಮಾನಿ, ದೇವತೆಯ ಸ್ವರೂಪ ಎಂದೇ ಕರೆಯಿಸಿಕೊಳ್ಳುವ ದಾಸರು ಕೊನೆಯವರೆಗೂ ಧರ್ಮವನ್ನು ಕಾಪಾಡಿಕೊಂಡು ಜೀವಿಸಿದವರು. ಹುಟ್ಟು ಸಾಧಕರಾದ ಕನಕಕರು ತಿರುಪತಿ ತಿಮ್ಮಪ್ಪನ ಒಕ್ಕಲಿನಲ್ಲಿ ಜನಿಸಿ, ಹರಿಹರ ಅಬೇಧವನ್ನು ಹೇಳುವ ಭಾಗವತ ಸಂಪ್ರದಾಯದಲ್ಲಿ ಬೆಳೆದು, ಶಿವನ ಆರಾಧಕರಾಗಿ, ನಂತರ ವಿಷ್ಣುವಿನ ಆರಾಧಕರಾಗಿ, ಇಬ್ಬರನ್ನೂ ಒಪ್ಪಿ-ಅಪ್ಪಿ ಆರಾಧಿಸಿ, ಯೋಗ್ಯರಾದ ಇವರು ಯೋಗಮಾರ್ಗದಲ್ಲಿ ಚಲಿಸಿ ಭಗವಂತನ ಸಾಕ್ಷಾತ್ಕಾರ ಪಡೆದವರು. ಅನೇಕ ವಿಚಾರಗಳು ಮತ್ತು ಅವರೊಳಗಿನ ವಿಶಿಷ್ಟ ಶ್ರದ್ಧೆ ಅವರ ಬದುಕನ್ನು ತಿಮ್ಮನಿಂದ ಕನಕನತ್ತ ಒಯ್ದು ಎರಡು ವಿಶೇಷ ಶಕ್ತಿಗಳೆಂದರೆ ಅತಿಶಯೋಕ್ತಿಯಲ್ಲ.

ಉತ್ತಮ ಸ್ಥಿತಿಯನ್ನು ನಿರಾಕರಿಸಿ, ಸಂತನಾಗಿ ಜೀವನವನ್ನು ಸಾರ್ಥಕ ಪಡಿಸಿಕೊಂಡ ಕನಕರು ದಾಸರಾದುದೇ ಒಂದು ವಿಶೇಷ. ನೂರಾರು ಕೀರ್ತನೆಗಳನ್ನು ನಮಗೆ ನೀಡಿ, ಜೀವನದ ಮಜಲುಗಳಿಗೆ ಮೆಟ್ಟಿಲಾದವರು. ಇವರ ಒಂದೊಂದು ಕೀರ್ತನೆಗಳೂ ನಮ್ಮ ಬದುಕನ್ನು ಬದಲಿಸಿ ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗುತ್ತವೆ. "ಜಗತ್ತಿನ ಸ್ವಾಮಿಯಾದ ಭಗವಂತನ ಅನುಗ್ರಹ ಸಂಪಾದನೆಗೆ ಯಜ್ಞ ದೃಷ್ಟಿಯಿಂದ ಮಾಡುವ ಕರ್ತವ್ಯವೇ ಸಾಧನೆ ಎನಿಸುವುದು. ಇದೇ ಪರಮಾತ್ಮನ ಪೂಜೆಯಾಗುವುದು" ಎನ್ನವಲ್ಲಿ ಅವರೆಷ್ಟು ಭಗವಂತನನ್ನು ನಂಬಿದ್ದರು ಎಂದು ಅರ್ಥವಾಗುತ್ತದೆ.



ಅವರ ಒಂದೊಂದು ಕೀರ್ತನೆಯೂ ಸಮಾಜದ ಓರೆಕೋರೆಗಳನ್ನು ತಿದ್ದುವಂತಹ ಕೀರ್ತನೆಗಳಾದರೆ, ಕೃತಿಗಳಲ್ಲೂ ಕೂಡಾ ಜ್ಞಾನದ ಕಣ್ಣನ್ನು, ದೇಹವನ್ನು ಸಾಧನಕ್ಕೆ ಮೀಸಲಿಡೆಂದು ನಿವೇದಿಸುತ್ತಾರೆ. ಎಲ್ಲವೂ ದೈವೀಶಕ್ತಿಯ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ.

ಭಕ್ತಿಯ ಉಕ್ತಿಗೆ ಕನಕದಾಸರೊಬ್ಬರೇ ಸರಳ ಉದಾಹರಣೆ. ನಮಗೆಲ್ಲಾ ಶ್ರೇಷ್ಠರಾದವರಲ್ಲಿ ನಾವು ಶರಣಾಗತರಾಗುತ್ತೇವೆ. ಅಂತಹ ಶ್ರೇಷ್ಠ ಶರಣಾಗತಿ ದೇವರಲ್ಲಿ ಮಾತ್ರ ಮಾಡಬಹುದು ಎಂದು ಒತ್ತಿ ಹೇಳುತ್ತಾರೆ, ಭಕ್ತಿಯ ಹಾದಿಯನ್ನು ಸುಲಭೀಕರಿಸುತ್ತಾರೆ. ತಿರುಳ್ಗನ್ನಡದ ನಾಡಲ್ಲಿ ಜನಿಸಿದ ಇವರು ಕನ್ನಡಿಗರ ನಡೆ-ನುಡಿಗಳನ್ನು ಕಂಡಮೇಲೆ ಎಲ್ಲರೂ ಆಡುವ ಭಾಷೆಯ ಸೊಗಡನ್ನು ಬಳಸಿರುವುದು ಶ್ಲಾಘನೀಯ.

ಕನಕದಾಸರು ವಿಶ್ವಮಾನವ ಧರ್ಮಕ್ಕೆ ಸೇರಿದವರು. ಧರ್ಮ ಮತ್ತು ಅಧರ್ಮವನ್ನು ಮನುಷ್ಯ ಮಾತ್ರ ತಿಳಿಯಬಲ್ಲನು. ಹಾಗಾಗಿ ಮನುಷ್ಯ ಯಾವಾಗಲೂ ಧರ್ಮದಿಂದ ನಡೆಯಬೇಕು ಎನ್ನುವ ಮಾತು ಆಪ್ತವಾಗುತ್ತದೆ. ಅವರು 'ಕಾಗಿನೆಲೆಯ ಆದಿಕೇಶವ'ನ ನಾಮಾಂಕಿತದಿಂದ ಕವನಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಮೀಸಲಾಗಿರದೆ ಸಂಗೀತ ಕ್ಷೇತ್ರದಲ್ಲೂ ಪ್ರಮುಖ ಕೊಡುಗೆಯನ್ನು ನೀಡಿದ್ದಾರೆ. ಬಾಡಾದಿಕೇಶವನ ಕೃಪೆಯಿಂದ ಕನಕದಾಸರು ಕರುನಾಡ ದಾಸಪರಂಪರೆಯಲ್ಲಿ ದಾಸ ಶ್ರೇಷ್ಠರಾಗಿ ಸೇರಿದ್ದೇ ಒಂದು ಸಾರ್ಥಕ. ನಾಡಿನಾಚೆಗೂ ಅವರ ಕೀರ್ತಿ ಹಬ್ಬಿದೆ. ಅವರನ್ನು ನೆನೆಯುವ ನಾವೇ ಪುಣ್ಯವಂತರು.

**– ಚ.ನಾ. ಭಾಗ್ಯಲಕ್ಷ್ಮೀ ನಾರಾಯಣ, ಮೈಸೂರು.**

ಸಂತಶ್ರೇಷ್ಠ ಕನಕದಾಸರ ಜಯಂತ್ಯುತ್ಸವದ ನಿಮಿತ್ತ ಲೇಖನ

# ಕೀರ್ತನೆಗಳಿಂದಲೇ ಸಮಾಜ ಕಟ್ಟಿದ ದಾಸವರೇಣ್ಯ

'ಕುಲ, ಕುಲ, ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ' ಎಂದು ದಾಸಶ್ರೇಷ್ಠ ಸಂತ ಕನಕದಾಸರು ಕುಲದ ದುರಭಿಮಾನಿಗಳನ್ನು ತಮ್ಮ ಕೀರ್ತನೆಯ ಮೂಲಕ ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ. ಸಂತರು, ಮಹಾತ್ಮರು, ಜ್ಞಾನಿಗಳೆಲ್ಲರೂ ಒಂದೇ. ಅವರಲ್ಲಿ ಬೇಧವೆಣಿಸಬಾರದು. ಜ್ಞಾನಿಗಳೆಲ್ಲರೂ ತಾವು ಕಂಡುಕೊಂಡ ಜ್ಞಾನದ ಸಾರವನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಶ್ರೀ ಕನಕದಾಸರು 15-16ನೇ (1508-1606) ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಶೂದ್ರದಾಸರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನೆಕಾರರು ಮತ್ತು ಪುರಂದರ ದಾಸರೊಂದಿಗೆ ಕರ್ನಾಟಕ ಸಂಗೀತಕ್ಕೆ ಅಪಾರ ಕೊಡುಗೆಯನ್ನು ನೀಡಿದವರು.

ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಭಕ್ತಿ, ವೈರಾಗ್ಯ, ಭಜನೆಗಳಷ್ಟೇ ಅಲ್ಲದೇ 16ನೇ ಶತಮಾನದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸಮರ ಸಾರಿದ್ದಾರೆ. ಸಾಮಾಜಿಕ ಮಡಿವಂತಿಕೆಯ ಕುರಿತು ತಮ್ಮ ಕೀರ್ತನೆಗಳಲ್ಲಿ ವಿಡಂಬಿಸಿದ್ದಾರೆ. ಅಂದಿನ ಸಮಾಜದ ಸ್ಥಿತಿಗತಿಗಳನ್ನು ತಿದ್ದುವ ಪ್ರಯತ್ನ ಮಾಡಿರುವ ದಾಸರಿವರು.




ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಗ್ರಾಮದಲ್ಲಿ 1509ರಲ್ಲಿ ಕುರುಬ ಜನಾಂಗಕ್ಕೆ ಸೇರಿದ ಬಚ್ಚಮ್ಮ ಮತ್ತು ಬೀರಪ್ಪನಾಯಕ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರಾಗಿದ್ದರು. ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರೂ ಹೌದು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದವರು.

ಸಹಬಾಳ್ವೆಯ ಗಟ್ಟಿತನವನ್ನು, ಸುಕ್ಕಾಗದ ಜೀವನಪ್ರೀತಿಯನ್ನು ತೋರುವುದು ಇದು ಕನಕದಾಸರ ವ್ಯಕ್ತಿತ್ವ. ಕನಕದಾಸರ ವ್ಯಕ್ತಿತದ ಭಾಗವೇ ಅವರ ಬರಹಗಳು. ಅವರ ಕೀರ್ತನೆಗಳಲ್ಲಿ ಸಮಾಜವನ್ನು ಕಟ್ಟುವ ಕ್ರಿಯೆಯಿದೆ. ಕುಟುಂಬವನ್ನು ಸೌಹಾರ್ದಗೊಳಿಸುವ ನೀತಿ ಇದೆ. ನಾಡನ್ನು ನಿಸರ್ಗದತ್ತವಾಗಿ ತೆಗೆದುಕೊಂಡು ಹೋಗುವ ಕೌಶಲ ಇದೆ. ಅವರ ಮುಂಡಿಗೆಗಳಂತೂ ನಮ್ಮ ಜ್ಞಾನವನ್ನು ಸದಾ ಎಚ್ಚರಿಸುತ್ತವೆ.

ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಉಗಾಭೋಗಗಳು, ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸುವುದು ಅಲ್ಲದೆ ಸಂಗೀತ ಪ್ರಪಂಚಕ್ಕೆ ತನ್ನದೇ ಆದ ಕೊಡುಗೆಯನ್ನು ಮುಂಡಿಗೆಗಳ ಮೂಲಕ ನೀಡಿದ್ದಾರೆ. ಸುಮಾರು 316 ಕೀರ್ತನೆಗಳು ಹಾಗೂ ಇನ್ನಿತರ ಸಾಹಿತ್ಯಗಳು ಮಾತ್ರ ಲಭ್ಯವಾಗಿವೆ. ಅವರು ಐದು ಮುಖ್ಯ ಕಾವ್ಯ ಕೃತಿಗಳು-ಮೋಹನ ತರಂಗಿಣಿ, ನಳ ಚರಿತ್ರೆ, ರಾಮ ಧಾನ್ಯ ಚರಿತೆ, ಹರಿ ಭಕ್ತ ಸಾರ ಇತ್ಯಾದಿ ರಚಿಸಿದ್ದಾರೆ. ತುಂಬು 100 ವರ್ಷ ಪೂರ್ಣವಾದ ನಂತರ ಮರಣ ಹೊಂದಿದರು ಎಂಬುದು ಇತಿಹಾಸ.

ಕವಿ ನಿಸರ್ಗದಲ್ಲಿ ಬದುಕುತ್ತಾನೆ. ಅಲ್ಲಿ ಸೃಜನಶೀಲತೆಯೂ ಬದುಕುತ್ತದೆ. ಸಂತನು ಸದಾ ನಿಸರ್ಗದ ಜೊತೆ ಸಂಬಂಧವನ್ನಿಟ್ಟುಕೊಂಡೇ ಸಾಗುವಂಥವನು. ಪ್ರಕೃತಿಯೇ ದೇವರೆಂದು ಭಾವಿಸಿದ ಲೋಕದೃಷ್ಟಿಯೇ ಕನ್ನಡ ಕಾವ್ಯತತ್ವವಾಗಿ ನಮ್ಮ ಸೃಜನಶೀಲ ಬಾಳನ್ನು ಬಾಳಿಸುತ್ತಲೇ ಬಂದಿದೆ. ನಾವು ಉಳಿಯುವ, ಬದುಕಿ ಬಾಳುವ ನುಡಿಯ ಪರಿಸರವನ್ನು ಮಲಿನವಾಗದಂತೆ ಕಾಪಾಡುವ ಜವಾಬ್ದಾರಿಯೂ ನಮ್ಮ ಮೇಲಿದೆ. ನಮ್ಮೆಲ್ಲ ಸಂತರು ನುಡಿಯನ್ನು ಮಲಿನವಾಗದಂತೆ ತಮ್ಮ ಅರಿವಿನಿಂದ, ಗುರುತ್ವದ ಶಕ್ತಿಯಿಂದ ಶುಚಿಗೊಳಿಸಿದರು. ನಾವು ಈ ನುಡಿಗಳನ್ನು ಹಿಡಿದು ಮನದ ತೋರಣಗಳನ್ನು ಕಟ್ಟುವ, ಸಮಾಜವನ್ನು ಅಂದಗೊಳಿಸುವ ಪ್ರಯತ್ನವನ್ನು ಮಾಡುತ್ತಲೇ ಇರಬೇಕಾಗುತ್ತದೆ.



**– ಎಂ.ಹೆಚ್. ಸವದತ್ತಿ.**
ಶಿಕ್ಷಕರು, ಸರ್ಕಾರಿ
ಪ್ರೌಢಶಾಲೆ ಏಕಲಾಸಪೂರ.

# ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರ

■ ವಿಜಯಸಾಕ್ಷಿ ಸುದ್ದಿ, ಗದಗ




ವಿಶ್ವವಿದ್ಯಾಲಯುಗಳಿಂದ ಹಮ್ಮಿಕೊಳ್ಳುತ್ತಿರುವ ರಾಷ್ಟ್ರೀಯ ಸೇವಾ ಯೋಜನೆಗಳಿಗೆ ಗ್ರಾಮಸ್ಥರಿಂದ ಉತ್ಸಾಹ ಕಡಿಮೆಯಾಗುತ್ತಿರುವುದು ವಿಪರ್ಯಾಸವಾಗಿದೆ ಎಂದು ಹಿರಿಯ ನ್ಯಾಯವಾದಿ ಹಾಗೂ ಬಾಲ ನ್ಯಾಯ ಮಂಡಳಿಯ ಸದಸ್ಯ ಜಿ.ಸಿ. ರೇಶ್ಮಿ ಹೇಳಿದರು.

ಸಮೀಪದ ಹಾತಲಗೇರಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಹುಬ್ಬಳ್ಳಿ, ಕೆಎಲ್‌ಇ ಸಂಸ್ಥೆಯ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯ ಮತ್ತು ಗ್ರಾ.ಪಂ. ಗಳ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದಲ್ಲಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಸಂಯೋಜನಾಧಿಕಾರಿ ಸುರೇಶ ಲಮಾಣಿ ಮಾತನಾಡಿ, ಪರಿಸರದಲ್ಲಿ ವಾಯುಗುಣದ ಬದಲಾವಣೆ ಮತ್ತು ವಿಪತ್ತು ನಿರ್ವಹಣೆಗಳ ಬಗ್ಗೆ ನಾವು ಈಗಾಗಲೇ ಕೋವಿಡ್-19ರಲ್ಲಿ ಸಾಕಷ್ಟು ಅನುಭವಗಳನ್ನು ಪಡೆದು ಕೊಂಡಿದ್ದೇವೆ. ನಾಗರಿಕರು ಬದಲಾವಣೆ ಮತ್ತು ವಿಪತ್ತುಗಳಿಗೆ ಅನುಗುಣವಾಗಿ ಕೃಷಿ ಕಾರ್ಯಗಳ ಮೂಲಕ ಆರ್ಥಿಕ ಅಭಿವೃದ್ಧಿ ಕಡೆ ಸಾಗಬೇಕಿದೆ ಎಂದರು.

ಗ್ರಾ.ಪಂ ಸದಸ್ಯೆ ಮಲ್ಲವ್ವ ಮಾಲ್ದಾರ, ಪ್ರೌಢಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಕೆ.ಎಸ್. ಅಸುಂಡಿ, ಮುಖ್ಯ ಶಿಕ್ಷಕ ಎನ್.ಹೆಚ್. ಕಂಬಳಿ, ಎನ್‌ಎಸ್‌ಎಸ್ ಯೋಜನಾಧಿಕಾರಿ ಡಾ. ಸಿ.ಬಿ. ರಣಗಟ್ಟಿಮಠ ಮುಂತಾದವರಿದ್ದರು. ಬಸವರಾಜ್ ಅಪ್ಪಾಜಿ ಸ್ವಾಗತಿಸಿದರು. ಭಾಗ್ಯ ಮತ್ತು ಶೀಲಾ ಪ್ರಾರ್ಥಿಸಿದರು. ಬಸಯ್ಯ ವೀರಾಪುರಮಠ ನಿರೂಪಿಸಿದರು. ಕೆ.ವಿನೋದ್ ವಂದಿಸಿದರು.

# ಅಂಚೆ ಇಲಾಖೆಯ ಸೇವೆಗಳ ಸದ್ಬಳಕೆಯಾಗಲಿ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ನಿಮ್ಮ ಉಳಿತಾಯಕ್ಕೆ ಸಹಾಯ ಮಾಡಲು ಅಂಚೆ ಕಚೇರಿ ಸಾಕಷ್ಟು ಸಹಾಯ ಮಾಡುತ್ತದೆ. ಅಂಚೆ ಕಚೇರಿಯಲ್ಲಿ ನಿಮ್ಮ ಆರ್ಥಿಕ ಪ್ರಗತಿಗೆ ಸಹಾಯಕವಾಗುವ ಅನೇಕ ಯೋಜನೆಗಳಿವೆ. ಅವುಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದು ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಹೇಳಿದರು.

ಕೋಡಿಕೊಪ್ಪದ ಜೋಡು ಬಸವೇಶ್ವರ ದೇವಸ್ಥಾನದಲ್ಲಿ ಮಂಗಳವಾರ ನಡೆದ ಅಂಚೆ ಜನ ಸಂಪರ್ಕ ಅಭಿಯಾನದಲ್ಲಿ ಅವರು ಮಾತನಾಡಿದರು.

ದುಡ್ಡು ಖರ್ಚು ಮಾಡುವುದು ಬಹಳ ಸುಲಭ. ಆದರೆ ಅದನ್ನು ಗಳಿಸುವುದು ಕಷ್ಟ. ಗಳಿಸಿದ ಹಣದಲ್ಲಿನ ಸ್ವಲ್ಪ ಭಾಗ ಉಳಿಕೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟಪಡಬೇಕಾಗುತ್ತದೆ. ಈಗ ಅಂಚೆ ಕಚೇರಿಯೂ ಸಹ ಬ್ಯಾಂಕುಗಳಂತೆ ಅನೇಕ ಸೇವೆಗಳನ್ನು ಒದಗಿಸುತ್ತಿದೆ. ಅವುಗಳನ್ನು ತಿಳಿದುಕೊಂಡು ಅಂಚೆ ಕಚೇರಿಯೊಂದಿಗೆ ವ್ಯವಹರಿಸಿರಿ ಎಂದರು.

ಅಧ್ಯಕ್ಷತೆ ವಹಿಸಿದ್ದ ರೋಣ ಅಂಚೆ ನಿರೀಕ್ಷಕ ಶ್ರೀಕಾಂತ ನೀಲಕಂಠಿ, ಪ.ಪಂ ಸದಸ್ಯ ಕುಮಾರಸ್ವಾಮಿ ಕೋರಧಾನ್ಯಮಠ, ಅಬ್ಬಿಗೆರೆ ಅಂಚೆ ಪಾಲಕ ಬಿ.ಬಿ. ಚೋಗಲಾ, ಕುಮಾರಸ್ವಾಮಿ ಗುರುವಡೆಯರ ಮಾತನಾಡಿದರು. ವೇದಿಕೆಯ ಮೇಲೆ ನಿವೃತ್ತ ನಿರ್ವಾಹಕ ಬಸವನಗೌಡ ಉದ್ದಣ್ಣವರ, ಕುಬೇರಪ್ಪ ನಾಶಿಪುಡಿ ಮುಂತಾದವರಿದ್ದರು.

ಮೇಲ್ವಿಚಾರಕರಾದ ಶ್ರೀಕಾಂತ ಮಾಡಲಗೇರಿ, ರವಿಕುಮಾರ ಜೋಷಿ ಉಪಸ್ಥಿತರಿದ್ದರು. ಯಲ್ಲಪ್ಪ ಲಕ್ಕುಂಡಿ ನಿರೂಪಿಸಿದರು. ಕೋಟುಮಚಗಿಯ ಬಿಪಿಎಂ ಸುನಿತಾ ಬಾದವಾಡಗಿ ಸ್ವಾಗತಿಸಿದರು. ಷಣ್ಮುಖ ಕೆರಿಯವರ ಪ್ರಾರ್ಥಿಸಿದರು.

ಜಕ್ಕಲಿ ಬಿಪಿಎಂ ಲತಾ ಕೊಟಗಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೋಡಿಕೊಪ್ಪ ಬಿಪಿಎಂ ತಿಪ್ಪಣ್ಣ ಬೇವಿನಕಟ್ಟಿ ವಂದಿಸಿದರು.

ಸ್ವದೇಶಿ ಹರಿಕಾರ ದಿ. ರಾಜೀವ್ ದೀಕ್ಷಿತರ 56ನೇ ಜನ್ಮದಿನ, 13 ನೇ ಪುಣ್ಯಸ್ಮರಣೆಯ ಲೇಖನ

# "ಸ್ವದೇಶಿ ನಾಯಕ"ನ ಕ್ರಾಂತಿಗಾಥೆ

ರಾಷ್ಟ್ರಬಂಧು ದಿ. ರಾಜೀವ್ ದೀಕ್ಷಿತ್ ಅವರು ಸ್ವದೇಶಿ ಚಳುವಳಿಕಾರರು, ಆಜಾದಿ ಬಚಾವೋ ಆಂದೋಲನದ ನೇತಾರರು ಹಾಗೂ ರಾಷ್ಟ್ರೀಯ ಪ್ರವರ್ತಕರು. ಸ್ವದೇಶಿ ಎಂಬ ಚಿಂತನೆ ಹಳತೆನಿಸುತ್ತಿದ್ದ ಸಮಯದಲ್ಲಿ ತಮ್ಮ ಪ್ರಖರ, ನಿಖರ ಭವಿಷ್ಯವಾಣಿಯ ಮೂಲಕ ಸ್ವದೇಶಿ ಚಿಂತನೆಗಳ ಪ್ರಸ್ತುತತೆ ಮತ್ತು ಅಗತ್ಯವನ್ನು ಹೇಳುತ್ತಾ ಹೋದವರು ರಾಜೀವ್ ದೀಕ್ಷಿತ್. ಸ್ವದೇಶಿ ವಸ್ತುಗಳ ವಿಚಾರಗಳಿಂದ ಬಹುದೊಡ್ಡ ಚಳುವಳಿಗೊಂದು ಚಾಲನೆ ನೀಡಿದರು. ಅದುವೇ 'ನಮ್ಮ ನಡೆ ಸ್ವದೇಶಿಯ ಕಡೆ'.

ರಾಜೀವ್ ದೀಕ್ಷಿತ್ ಹುಟ್ಟಿದ್ದು ಉತ್ತರ ಪ್ರದೇಶದ ಅಲಿಗಢ ಗ್ರಾಮದಲ್ಲಿ, ನವೆಂಬರ 30, 1967ರಲ್ಲಿ. ತಂದೆ ರಾಧೇಶ್ಯಾಮ ದೀಕ್ಷಿತರು, ರಾಜೀವರಿಗೆ ಉತ್ತಮ ಸಂಸ್ಕಾರ ನೀಡಿ ಉತ್ತಮ ಭಾರತೀಯರನ್ನಾಗಿ ರೂಪಿಸಿದವರು. ರಾಜೀವರು ಅಲಹಾಬಾದ (ಪ್ರಯಾಗರಾಜ) ಇನಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಬಿ.ಟೆಕ್ ಪದವಿ, ಕಾನ್ಪುರಿನಲ್ಲಿ ಎಂ.ಟೆಕ್ ಪದವಿಯನ್ನು ಉಪಗ್ರಹ ದೂರಸಂಪರ್ಕ ವಿಷಯದ ಮೇಲೆ ಪಡೆದುಕೊಂಡರು. ಫ್ರಾನ್ಸ್‌ನ ಟೆಲಿಕಮ್ಯೂನಿಕೇಷನ್ ಕ್ಷೇತ್ರದಲ್ಲಿ ವಿಜ್ಞಾನಿಯಾಗಿ ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು.



ಮೂಲತಃ ಸ್ಯಾಟಲೈಟ್ ಕಮ್ಯೂನಿಕೇಶನ್‌ನಲ್ಲಿ ಉನ್ನತ ವ್ಯಾಸಾಂಗ ಮಾಡಿರುವ ರಾಜೀವರು ನೌಕರಿ ಎಂದು ಮಾಡಿದ್ದು ಇಪ್ಪತ್ತೇ ತಿಂಗಳು. ತಮ್ಮ ಹೊಟ್ಟೆಪಾಡಿಗಿಂತ ಸ್ವದೇಶಿ ಆಂದೋಲನ ದೊಡ್ಡದೆನಿಸಿದ್ದರಿಂದ 1992ರಿಂದಾಚೆಗೆ ಚಳವಳಿಯನ್ನೇ ಬದುಕನ್ನಾಗಿ ಮಾಡಿಕೊಂಡರು. ಭಾರತದ ಸಮಗ್ರ ನಾಶಕ್ಕೆ ಜನಿಸಿರುವ ಮಲ್ಟಿ ನ್ಯಾಷನಲ್ ಕಂಪೆನಿಗಳ ವಿರುದ್ಧ ದನಿಯೆತ್ತಿದವರು ದಿ. ರಾಜೀವ್ ದೀಕ್ಷಿತರು.

ವಿದೇಶಿ ವಸ್ತುಗಳ ವ್ಯಾಮೋಹ ನಮ್ಮ ಭಾರತದ ಆರ್ಥಿಕತೆಗೆ ಕಂಟಕವಾಗುತ್ತದೆ ಎಂಬುದನ್ನು ದೇಶಾದ್ಯಂತ ಪರ್ಯಟನೆ ಮಾಡುತ್ತ, ತಮ್ಮ ಹದವಾದ ಮಾತುಗಾರಿಕೆ, ಬೌದ್ಧಿಕ ಪ್ರೌಢಿಮೆಯಿಂದ ಜನರನ್ನು ಒಟ್ಟುಗೂಡಿಸಿ ಸ್ವದೇಶಿ ಆಂದೋಲನವನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ಅವರ ಮಹಾ ಸಾಧನೆ. ಭಾರತದ ಆರ್ಥಿಕ ಸಬಲೀಕರಣಕ್ಕೆ ಸ್ವದೇಶಿ ವಸ್ತುಗಳ ಬಳಕೆ ಮಾಡುವ ಅಗತ್ಯವನ್ನು ಸಾರಿಸಾರಿ ಹೇಳಿದರು. ಭಾರತದ ಪ್ರಾಚೀನ ಇತಿಹಾಸದ ಮಾಹಿತಿಯನ್ನು, ಭಾರತೀಯರ ಸಾಧನೆಯ ಹಿರಿಮೆಯನ್ನು ಮೆಲುಕು ಹಾಕುತ್ತ ನಮ್ಮ ಹೃದಯದಲ್ಲಿ ಹೆಮ್ಮೆಯ ಭಾರತವನ್ನ ತುಂಬಿದರು.

ಭಾರತೀಯರು ಸ್ವಾವಲಂಬಿಗಳಾಗಬೇಕೆಂಬ ಪರಿಶುದ್ಧ ಚಿಂತನೆ, ಸ್ವದೇಶಿ ಚಿಕಿತ್ಸೆ, ಗೋ ಚಿಕಿತ್ಸೆ, ರೈತಪರ ಕಾಳಜಿಗಳಿಂದ ಯುವಜನತೆಯ ನೆಚ್ಚಿನ 'ಸ್ವದೇಶಿ ನಾಯಕ' ಎನಿಸಿದ್ದರು. 'ಅಡಾಪ್ಟ್ ಆಯರ್ವೆದ' ಎಂಬ ಘೋಷಣೆ ಇವರದಾಗಿತ್ತು. ಭಾರತೀಯತ್ವದ ಪ್ರಬಲ ಪ್ರತಿಪಾದಿಯಾಗಿ, ಹೊಸ ರಾಷ್ಟ್ರ ನಿರ್ಮಾಣದ ಹರಿಕಾರರಾಗಿ ಇದೇ ಪ್ರಚಾರಕಾರ್ಯಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಹಾಗಾಗಿ ವಿವಾಹ ಮಾಡಿಕೊಳ್ಳದೇ ಅಪ್ಪಟ ಬ್ರಹ್ಮಚಾರಿಯಾಗಿ ಉಳಿದುಕೊಂಡರು. ದಯಾನಂದ ಸರಸ್ವತಿ, ಭಗತ್ ಸಿಂಗ್, ಚಂದ್ರಶೇಖರ ಆಜಾದ ಮೊದಲಾದ ಕ್ರಾಂತಿಕಾರರ ವಿಚಾರಗಳಿಂದ ಪ್ರೇರಿತರಾದ ದಿಕ್ಷೀತರು ನವಭಾರತದ ನಿರ್ಮಾಣದ ವಿಶಿಷ್ಟ ಕ್ರಾಂತಿಕಾರಿಯಾಗಿ ಮಾರ್ಪಟ್ಟರು.

ಗೋವುಗಳ ರಕ್ಷಣೆ, ಸಾಮಾಜಿಕ ಅಸಮಾನತೆ, ಅನ್ಯಾಯಗಳ ವಿರುದ್ಧ ಸಮರ ಸಾರಿದರು.

ಅತಿ ಚಿಕ್ಕವಯಸ್ಸಿನಲ್ಲೇ ರಾಜೀವರು ರಾಷ್ಟ್ರೀಯ ಚಿಂತನೆಗಳನ್ನು ಪಸರಿಸುತ್ತ ಸತತ 24 ವರ್ಷಗಳ ಕಾಲ ಇಡೀ ದೇಶವನ್ನ ಸುತ್ತಾಡಿ, ಹದಿನೈದು ಸಾವಿರಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿ ಕೊಟ್ಯಾಂತರ ಜನರ ಚಿಂತನೆಗಳ ಧಾಟಿಯನ್ನೇ ಬದಲಿಸಿದರು. ಇಂತಹ ಅಪರೂಪದ ವ್ಯಕ್ತಿ ತಮ್ಮ 43ನೇ ವಯಸ್ಸಿನಲ್ಲಿಯೇ ತೀರಿಹೋದದ್ದು (30ನವೆಂಬರ್, 2010) ದುರದೃಷ್ಟಕರ ಸಂಗತಿ.

ಛತ್ತಿಸಗಡದಲ್ಲಿ ಭಾಷಣಕ್ಕೆಂದು ಹೋದ ಸಂದರ್ಭದಲ್ಲಿ ನಿಗೂಢವಾಗಿ ಸಂಭವಿಸಿದ ಅವರ ಸಾವು ಅನೇಕ ಸಂದೇಹಗಳನ್ನುಂಟು ಮಾಡಿದೆ. ಅವರ ಭವ್ಯ ಭಾರತ ನಿರ್ಮಾಣ, ಸ್ವದೇಶಿ ಆಂದೋಲನ್ ನಮಗೆ ಸ್ಪೂರ್ತಿದಾಯಕವಾಗಿವೆ.

ಅವರು ಮೂಡಿಸಿದ ಈ ಜಾಗೃತಿಯ ಫಲವೇ ಇವತ್ತು 'ಮೇಕ್ ಇನ್ ಇಂಡಿಯಾ' ಆಗಿದೆ. ನವೆಂಬರ್ 30ರ ದಿನವನ್ನು 'ಸ್ವದೇಶಿ ದಿವಸ' ಎಂದು ಆಚರಿಸಲಾಗುತ್ತದೆ. ಈ ಮಹಾನುಭಾವರ ಆತ್ಮಕ್ಕೆ ಶ್ರದ್ಧಾಪೂರ್ವಕ ನಮನಗಳು. ಜೈ ಹಿಂದ್ ಜೈ ಸ್ವದೇಶಿ.

**– ಶ್ರೀಕಾಂತ ರವೀಂದ್ರ ಕೊಪ್ಪರ್.**
ಗದಗ.

## ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಪರಿಶಿಷ್ಟ ಜಾತಿಯ ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಗದಗ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿ ಸಲ್ಲಿಸುವ ಅವಧಿಯನ್ನು ಡಿಸೆಂಬರ್ 8 ರವರೆಗೆ ವಿಸ್ತರಿಸಲಾಗಿದೆ.

ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು.

ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಪರಿಶಿಷ್ಟ ಜಾತಿ ಓರ್ವ ಹಾಗೂ ಪರಿಶಿಷ್ಟ ಪಂಗಡದ ಓರ್ವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ತರಬೇತಿಯ ಅವಧಿ ವೇಳೆ ಮಾಹೆಯಾನ 15,000/ರೂ.ಗಳ ಸ್ಟೈಪಂಡ್ ನೀಡಲಾಗುವುದು. ಈ ತರಬೇತಿಯು 12 ತಿಂಗಳ ಅಪ್ರೆಂಟಿಸ್ ತರಬೇತಿಯಾಗಿದ್ದು ತಾತ್ಕಾಲಿಕವಾಗಿರುತ್ತದೆ. ತರಬೇತಿ ಮುಗಿದ ನಂತರ ಮುಂದುವರೆಸಲು ಅಥವಾ ಖಾಯಂಗೊಳಿಸುವಂತೆ ಒತ್ತಡ ತರುವಂತಿಲ್ಲ. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು.

ಒಮ್ಮೆ ಫಲಾನುಭವಿ ಯಾದವರನ್ನು ಈ ಯೋಜನೆಯಡಿ ಮತ್ತೊಂದು ಅವಧಿಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ. ಹಾಗೂ ಸುಳ್ಳು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

ಆಸಕ್ತರು ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ 30, ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಗದಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಬಿ. ಮಡ್ಲೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಿರೇಮಠದಲ್ಲಿ ನಡೆದ ಭಕ್ತರ ಸಭೆಯಲ್ಲಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು

# ಡಿ.1ರಿಂದ ಹಿರೇಮಠದ ಜಾತ್ರಾ ಮಹೋತ್ಸವ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಡಿಸೆಂಬರ್ 1ರಿಂದ 11ರವರೆಗೆ ನರೇಗಲ್ಲ ಹಿರೇಮಠದ ಜಾತ್ರಾ ಮಹೋತ್ಸವವು ಜರುಗಲಿದೆ ಎಂದು ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ತಿಳಿಸಿದರು.

ಹಿರೇಮಠದಲ್ಲಿ ನಡೆದ ಭಕ್ತರ ಸಭೆಯಲ್ಲಿ ಶ್ರೀಗಳು ಮಾತನಾಡಿ, ಡಿಸೆಂಬರ್ 1ರಿಂದ 9ರವರೆಗೆ ತಾವು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಪುರಾಣವನ್ನು ಹೇಳುವುದಾಗಿ ತಿಳಿಸಿದರು. ನಿತ್ಯವೂ ಸಿದ್ಧಾಂತ ಶಿಖಾಮಣಿಯ ಪ್ರವಚನ, ಡಿ. 1ರಂದು ಜಾತ್ರಾ ಮಹೋತ್ಸವವನ್ನು ರೋಣ ಶಾಸಕ ಜಿ.ಎಸ್. ಪಾಟೀಲ ಉದ್ಘಾಟಿಸಲಿದ್ದಾರೆ. ಮುಖಂಡ ಸಿದ್ದಣ್ಣ ಬಂಡಿ, ಡಾ. ಕೆ.ಬಿ. ಧನ್ನೂರ, ಶಿವನಗೌಡ ಪಾಟೀಲ, ನಿಂಗನಗೌಡ ಲಕ್ಕನಗೌಡ್ರ, ಅಂದಪ್ಪ ವೀರಾಪೂರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಡಿ. 2ರಂದು ಎನ್.ಎಸ್. ಹಿರೇಮಠರವರಿಂದ ಸಿದ್ಧಾಂತ ಶಿಖಾಮಣಿ ಗ್ರಂಥ ಪರಿಚಯ ಜರುಗಲಿದ್ದು, ಮುತ್ತಣ್ಣ ಕಡಗದ, ಉಮೇಶ ಸಂಗನಾಳಮಠ, ಪ.ಪಂ ಸದಸ್ಯರು ಅತಿಥಿಗಳಾಗಿ ಆಗಮಿಸಲಿದ್ದಾರೆ. ಡಿ. 3ರಂದು ಶರಣ ಸ್ಥಲದ ಬಗ್ಗೆ ಎಂ.ಎಸ್. ದಢೇಸೂರಮಠ ಉಪನ್ಯಾಸ ನೀಡಲಿದ್ದು, ಡಾ. ಶೇಖರ ಡಿ.ಸಜ್ಜನರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಡಿ. 4ರಂದು ತಾಮಸ ನಿರಸನ ಸ್ಥಲದ ಬಗ್ಗೆ ಎಂ.ಎ. ಹಿರೆವಡೆಯರ ಉಪನ್ಯಾಸ ನೀಡಲಿದ್ದು, ಚಳಗೇರಿಯ ಷ.ಬ್ರ. ಶ್ರೀ ವೀರಸಂಗಮೇಶ್ವರ ಶಿವಾಚಾರ್ಯರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಅಮರೇಶ ಗಾಣಿಗೇರ, ಶಿವಕುಮಾರ ಕೋರಧಾನ್ಯಮಠ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಗಳು ತಿಳಿಸಿದರು.



ಡಿ. 5ರಂದು ಮಹಿಳಾ ಗೋಷ್ಠಿ ಜರುಗಲಿದ್ದು, ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ ವಿಶೇಷ ಉಪನ್ಯಾಸ ನೀಡುವರು. ಕಸ್ತೂರಿಬಾಯಿ ಧನ್ನೂರ ಅಧ್ಯಕ್ಷತೆ ವಹಿಸಲಿದ್ದು, ಶಾಸಕರ ಧರ್ಮಪತ್ನಿ ಅನ್ನಪೂರ್ಣಮ್ಮ ಪಾಟೀಲ, ಪ್ರಮುಖರಾದ ಮಂಜುಳಾ ರೇವಡಿ, ಎಲ್.ಎಸ್. ಹಿರೇಮಠ, ಎಚ್.ಎಂ. ರತ್ನಮ್ಮ, ಭಾರತಿ ಶಿರ್ಸಿ ಮುಂತಾದವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಡಿ.6ರಂದು ಡಯಟ್‌ನ ಹಿರಿಯ ಉಪನ್ಯಾಸಕ ಕಾಶಿನಾಥ ಸಾಲಿಮಠ ಉಪನ್ಯಾಸ ನೀಡಲಿದ್ದು, ಅಸೂಟಿ ಹಿರೇಮಠದ ಶ್ರೀ ರೇವಣಸಿದ್ಧ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ರುದ್ರಪ್ಪ ತೋಟದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಡಿ. 7ರಂದು ಮಕ್ಕಳ ಹಬ್ಬದ ಆಚರಣೆ ನಡೆಯಲಿದೆ. ಗದಗ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಮ್.ಎ. ರಡ್ಡೇರ, ಡಯಟ್‌ನ ಪ್ರಾಚಾರ್ಯ ಜಿ.ಎಲ್. ಬಾರಾಟಕ್ಕೆ, ರೋಣ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎನ್. ಹುರಳಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಡಿ. 8ರಂದು ಯೋಧರ ಸ್ಮರಣೆ ಕಾರ್ಯಕ್ರಮ ಜರುಗಲಿದ್ದು, ನರೇಗಲ್ಲದ ನಿವೃತ್ತ ಯೋಧರಿಗೆ ಗೌರವ ಸಮರ್ಪಣೆ ನಡೆಯಲಿದೆ. ದೊಡ್ಡಯ್ಯ ಅರವಟಗಿಮಠ ಉಪನ್ಯಾಸ ನೀಡಲಿದ್ದಾರೆ. ಡಿ. 9ರಂದು ಪುರಾಣ ಪ್ರವಚನದ ಮಂಗಲ ಕಾರ್ಯ ಜರುಗಲಿದೆ. ಕೊತಬಾಳ ಅಂಕಲಿ ಮಠದ ಶ್ರೀ ಗಂಗಾಧರ ಮಹಾಸ್ವಾಮಿಗಳು, ಜಿಗೇರಿಯ ಷ.ಬ್ರ. ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯರು, ನಿಡಗುಂದಿಕೊಪ್ಪದ ಶ್ರೀ ಅಭಿನವ ಚನ್ನಬಸವ ಮಹಾಸ್ವಾಮಿಗಳು, ನರೇಗಲ್ಲ ದರಗಾದ ಹಜರತ್ ಸೈಯದ್ ಹುಸೇನ ಮಂಜೂರ ಶಾವಲಿಯವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಶ್ರೀಗಳು ತಿಳಿಸಿದರು.

ಡಿ. 10ರಂದು ಬೀಚಿ ಬಳಗದ ದಶಮಾನೋತ್ಸವ ದಶಮಾನ ಸಂಭ್ರಮ ಜರುಗಲಿದ್ದು, ಹಿರೇಮಗಳೂರು ಕಣ್ಣನ್, ಗಂಗಾವತಿಯ ಬೀಚಿ ಬಿ. ಪ್ರಾಣೇಶ್, ಬಸವರಾಜ ಮಹಾಮನೆ, ನರಸಿಂಹ ಜೋಷಿ, ಅನಿಲ ವೈದ್ಯ, ನಾಗಶ್ರೀ ತ್ಯಾಗರಾಜನ್ ಭಾಗವಹಿಸಲಿದ್ದು, ದಶಮಾನೋತ್ಸವದ ಸ್ಮರಣ ಸಂಚಿಕೆಯೂ ಈ ಸಂದರ್ಭದಲ್ಲಿ ಬಿಡುಗಡೆಯಾಗಲಿದೆ ಎಂದರು.

ಡಿ. 11ರಂದು ಬೆ. 6ಕ್ಕೆ ಶ್ರೀ ಮಳೆ ಮಲ್ಲೇಶ್ವರ ಗದ್ದುಗೆಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ ಜರುಗಲಿದೆ. ಬೆ. 8ಕ್ಕೆ ಗುರುಗಳ ಭಾವಚಿತ್ರ ಹಾಗೂ ವೀರಶೈವ ಲಿಂಗಾಯತ ಧರ್ಮ ಗ್ರಂಥಗಳ ಪಲ್ಲಕ್ಕಿ ಉತ್ಸವವು ನರೇಗಲ್ಲದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಮಂಡಳದ ಸದಸ್ಯಣಿಯರು ಮತ್ತು ಶ್ರೀ ರೇಣುಕಾಚಾರ್ಯ ಪ್ರಾಥಮಿಕ ಶಾಲೆಯ ಗುರುಮಾತೆಯರಿಂದ ನಿತ್ಯವೂ ಭಕ್ತಿ ಸಂಗೀತ, ಧರ್ಮ ಗ್ರಂಥ ಪಠಣ ನಡೆಯಲಿದೆ. ಡಿ. 10ರಂದು ಬೆಳಿಗ್ಗೆ 7ಕ್ಕೆ ಉಚಿತ ಅಯ್ಯಾಚಾರ ಮುಂತಾದ ಧಾರ್ಮಿಕ ಕಾರ್ಯಗಳು ನಡೆಯಲಿವೆ ಎಂದು ತಿಳಿಸಿದ ಶ್ರೀಗಳು, ಭಕ್ತರೆಲ್ಲರೂ ಈ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದರು.

ಸಭೆಯಲ್ಲಿ ನರೇಗಲ್ಲ ಮತ್ತು ಮಜರೆ ಗ್ರಾಮಗಳ ಸರ್ವ ಜನಾಂಗದ ಸದ್ಭಕ್ತರು, ಗಣ್ಯರು ಪಾಲ್ಗೊಂಡಿದ್ದರು.

# ಮಹರ್ಷಿ ವಾಲ್ಮೀಕಿ ಸದಾ ಸ್ಮರಣೀಯರು



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ವಾಲ್ಮೀಕಿ ಮಹರ್ಷಿಗಳು ರಾಮಾಯಣ ರಚಿಸುವ ಮೂಲಕ ರಾಮನನ್ನು ಪರಿಚಯ ಮಾಡಿಸಿದ್ದಾರೆ. ವಿಶ್ವಕ್ಕೆ ವಾಲ್ಮೀಕಿ ನೀಡಿರುವ ಕೊಡುಗೆ ಅಪಾರ ಎಂದು ರೋಣ ಪುರಸಭೆ ಉಪಾಧ್ಯಕ್ಷ ಮಿಥುನ ಜಿ.ಪಾಟೀಲ ಹೇಳಿದರು.

ಪಟ್ಟಣದ ವಾಲ್ಮೀಕಿ ಸಮಾಜದ ವತಿಯಿಂದ ಮಾರೆಮ್ಮನ ದೇವಸ್ಥಾನದ ಬಳಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಮನಂತಹ ಅಲೌಕಿಕ ವ್ಯಕ್ತಿತ್ವವನ್ನು ಜಗತ್ತಿಗೆ ಪರಿಚಯಿಸುವುದು ಸಾಮಾನ್ಯದ ಮಾತಲ್ಲ. ಅಂತಹ ವ್ಯಕ್ತಿಯ ಬಗ್ಗೆ ಬರೆಯಬೇಕಾದಲ್ಲಿ ವಾಲ್ಮೀಕಿ ಸಹ ಅಲೌಕಿಕ ವ್ಯಕ್ತಿತ್ವವನ್ನು ಹೊಂದಿರಲೇಬೇಕು. ಅಂತಹ ಸಿದ್ಧಿಪುರುಷರನ್ನು ಹೊಂದಿದ್ದ ನಾವೇ ಧನ್ಯರು ಎಂದರು.

ನಿಡಗುಂದಿಕೊಪ್ಪದ ಶಾಖಾ ಶಿವಯೋಗ ಮಂದಿರದ ಅಭಿನವ ಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿ, ವಾಲ್ಮೀಕಿ ಅವರು ರಚಿಸಿದ ರಾಮಾಯಣ ಮಹಾಕಾವ್ಯ ಇಡೀ ವಿಶ್ವಕ್ಕೆ ಭಾರತ ನೀಡಿದ ಬಹುದೊಡ್ಡ ಸಾಹಿತ್ತಿಕ ಕೊಡುಗೆಯಾಗಿದೆ.


ವಾಲ್ಮೀಕಿ ರಾಮಾಯಣ ದೇಶ-ಭಾಷೆಗೆ ಸೀಮಿತಗೊಳ್ಳದೆ ಜಾಗತಿಕವಾಗಿ ಆರಾಧಿಸಲ್ಪಟ್ಟಿದೆ. ರಾಮಾಯಣದಲ್ಲಿ ಬಿಂಬಿತ'ವಾಗಿರುವ ಹಲವಾರು ಅಂಶಗಳು ಸಮಾಜದ ಏಳಿಗೆಗೆ ಪೂರಕವಾಗಿ ದಾರಿ ದೀಪವಾಗಿದೆ ಎಂದರು.

ಬೆಳಿಗ್ಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರ ಮೆರವಣಿಗೆ ಜರುಗಿತು. ವೀರೇಶ ವಾಲ್ಮೀಕಿ ಉಪನ್ಯಾಸ ನೀಡಿದರು. ಹಿರಿಯ ವಕೀಲ ಎಂ.ಎನ್. ಹುಲಕೋಟಿ, ಲಕ್ಕಪ್ಪ ಬಿಲ್ಲಿನಾಯಕ, ವೀರಣ್ಣ ಜಡಗಣ್ಣವರ, ಶೇಖಪ್ಪ ಜುಟ್ಲ, ಬಸವರಾಜ ತಳವಾರ, ಹನಮಂತಪ್ಪ ಹಟ್ಟಿಮನಿ, ಕನಕಮೂರ್ತಿ ನರೇಗಲ್ಲ, ಬಸವರಾಜ ಅಬ್ಬಿಗೇರಿ, ಬಸವರಾಜ ಹುಲಕೋಟಿ, ಶ್ರೀನಿವಾಸ ಹುಲಕೋಟಿ, ಹನಮಂತಪ್ಪ ಕುರ್ಲಗೇರಿ, ಹನಮಂತಪ್ಪ ಬಾದನಟ್ಟಿ, ಮಾರುತೆಪ್ಪ ಜುಟ್ಲ, ಬಸಪ್ಪ ಗಂಜಾಳ, ಭೀಮಣ್ಣ ತಳವಾರ, ಅಶೋಕ ಹುಲಕೋಟಿ, ಕೃಷ್ಣ ಜುಟ್ಲ, ಅಲ್ಲಾಭಕ್ಷಿ ನದಾಫ್, ಮಂಜುನಾಥ ಹುಲಕೋಟಿ ಸೇರಿದಂತೆ ವಾಲ್ಮೀಕಿ ಸಮಾಜದ ಭಾಂದವರು ಇದ್ದರು.

## ಶ್ರೀ ಗುರುಮೃತ್ಯುಂಜಯ ಅಪ್ಪನವರ ಸ್ಮರಣೋತ್ಸವ ಮಾಲಿಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಮಣಕವಾಡದ ಮಹಿಮಾ ಪುರುಷ ಶ್ರೀ ಗುರುಮೃತ್ಯುಂಜಯ ಮಹಾಸ್ವಾಮಿಗಳ ಸ್ಮರಣೋತ್ಸವ ಮಾಲಿಕೆ ಕಾರ್ಯಕ್ರಮ ನ.30ರ ಮುಂಜಾನೆ 11 ಗಂಟೆಗೆ ನಗರದ ಲಖಾನಿ ಆಸ್ಪತ್ರೆ ಎದುರುಗಿನ ಶ್ರೀ ಗುರುಮೃತ್ಯುಂಜಯ ಗುರುಕುಲ ಆಶ್ರಮದ ಸಭಾಭವನದಲ್ಲಿ ಜರುಗಲಿದೆ. ಹಿರಿಯ ಸಾಹಿತಿಗಳಾದ ಐ.ಕೆ. ಕಮ್ಮಾರ ಸಮಾರಂಭದ ಅಧ್ಯಕ್ಷತೆ ವಹಿಸುವರು.




ಸಮಾರಂಭದಲ್ಲಿ ರಾಷ್ಟ್ರೀಯ ವೈದ್ಯಕೀಯ ಒಲಂಪಿಕ್ ಕ್ರೀಡಾಕೂಟದಲ್ಲಿ ಭಾಗವಹಿಸಿ 4 ಬಂಗಾರದ ಪದಕ ಪಡೆದ ಡಾ. ಜಿ.ಬಿ. ಬೀಡನಾಳ ಅವರನ್ನು ಸನ್ಮಾನಿಸಲಾಗುವುದು. ಜಗನ್ನಾಥ ರಾಸನಕರ್, ಯುವ ಕವಿ ಸಿ.ಆರ್. ಗಡಾದ ಭಕ್ತಿ ಸೇವೆ ವಹಿಸಿಕೊಳ್ಳುವರು.

ನಾಗಾವಿಯ ಕೆ.ಬಿ. ಮರಡ್ಡಿ, ಮೃತ್ಯುಂಜಯ ಹಟ್ಟಿ, ಹಿರೇಹಂದಿಗೋಳದ ಶರಣಪ್ಪಗೌಡ್ರು ಬಳ್ಳೊಳ್ಳಿ, ಜಕ್ಕನಗೌಡ ಜಕ್ಕನಗೌಡ್ರು, ಎಚ್.ಎನ್. ಕುರಿ, ಶಿವಶಂಕರಪ್ಪ ಆರಟ್ಟಿ, ರಾಯಪ್ಪಜ್ಜ ನಾಗನೂರ, ರಾಜೇಂದ್ರಸಾ ಕಲಬುರ್ಗಿ, ಶಿವಣ್ಣ ಒಡೆಯರ ಮುಂತಾದವರು ಉಪಸ್ಥಿತರಿರುವರು.

ವನಮಾಲಾ ಮಾನಶೆಟ್ಟಿ ಹಾಗೂ ಶ್ರೇಯಾಂಕ ಎಸ್.ಮೇತ್ರಿ, ಶ್ರೇಯಸ್ ಎಸ್.ಮೇತ್ರಿ ಅವರಿಂದ ಸಂಗೀತ ಜರುಗಲಿದೆ. ಎಸ್. ತೆಂಬದಮನಿ ತಬಲಾ ಸಾಥ್ ನೀಡುವರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪನ ಕೃಪೆಗೆ ಪಾತ್ರರಾಗಲು ಆಶ್ರಮದ ವಿದ್ಯಾರ್ಥಿಗಳಾದ ಆಲಮ್, ಅಸ್ಲಮ್, ಅಕ್ರಮ್, ಸ್ನೇಹಾ, ಕೋಮಲ ಹಾಗೂ ಲಕ್ಷ್ಮೀ ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ಮಕ್ಕಳಿಗೆ ಸಂಸ್ಕಾರದ ಶಿಕ್ಷಣ ನೀಡಿ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಯಾವುದೇ ವೃತ್ತಿಯಾಗಲಿ, ಸೇವಾ ಮನೋಭಾವ ಮುಖ್ಯ. ನಾವು ಮಾಡುವ ಕಾರ್ಯಗಳಲ್ಲಿ ಪರೋಪಕಾರವಿರಬೇಕು. ಸೃಜನಾತ್ಮಕ ಕೆಲಸಗಳ ಮೂಲಕ ಶ್ರೇಷ್ಠವಾದ ವ್ಯಕ್ತಿತ್ವ ರೂಪಿಸಿಕೊಂಡು ಮುನ್ನಡೆಯಬೇಕು ಎಂದು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಕಲ್ಲಯ್ಯಜ್ಜನವರು ನುಡಿದರು.

ತಾಲೂಕಿನ ಜಂತಲಿ ಶಿರೂರು ಗ್ರಾಮದಲ್ಲಿ ಕವಯಿತ್ರಿ ಭಾಗ್ಯಶ್ರೀ ಹಳ್ಳಿಕೇರಿಮಠರ ಸೀಮಂತ ಕಾರ್ಯಕ್ರಮದ ನಿಮಿತ್ತ ಹಮ್ಮಿಕೊಂಡಿದ್ದ ತುಲಾಭಾರ ಹಾಗೂ



ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ತುಲಾಭಾರ ಹಾಗೂ ಗುರುವಂದನಾ ಸ್ವೀಕರಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಷ.ಬ್ರ. ಶ್ರೀ ಪಕೀರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಷ.ಬ್ರ ಶ್ರೀ ಸಿದ್ಧವೀರ ಶಿವಾಚಾರ್ಯ ಮಹಾಸ್ವಾಮಿಗಳು, ಷ.ಬ್ರ. ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಜೀಗೇರಿ, ಷ.ಬ್ರ ಶ್ರೀ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ರಾಜೂರು ಅಡ್ನೂರು, ಕೊತಬಾಳ ಅಂಕಲಗಿ ಅಡವಿಸಿದ್ಧೇಶ್ವರ ಮಠದ ಪ.ಪೂ. ಗಂಗಾಧರ ಮಹಾಸ್ವಾಮಿಗಳು, ಜಂತಲಿ ಶಿರೂರು ಗ್ರಾಮದ ವೇ.ಮೂ. ವೀರಭದ್ರಯ್ಯ ಹಳ್ಳಿಕೇರಿಮಠ ಅಜ್ಜನವರು ಆಶೀರ್ವಚನ ನೀಡಿದರು.

ಶಿವಲಿಂಗಯ್ಯ ಶಾಸ್ತ್ರಿಗಳು, ಸಿ.ಎಮ್. ಕಾಳನ್ನವರ್, ಬಳ್ಳಾರಿಯ ನಿಜಲಿಂಗಯ್ಯ ಚಿಕ್ಕಸಿಂದೋಗಿ ಹೀರೆಮಠ, ತಿಪ್ಪನಗೌಡರ್, ಜಿಗಳೂರಿನ ಸಂಗಯ್ಯ, ವೇದಿಕೆಯಲ್ಲಿದ್ದರು. ಪ್ರಾರಂಭದಲ್ಲಿ ಗಾಯಕ ನೂರಂದಯ್ಯ ಹಾಗೂ ಸಂಗಡಿಗರಿಂದ ಪ್ರಾರ್ಥನೆ ಜರುಗಿತು. ರಾಜ್ ಕರಣ್ ಹಾಗೂ ವೀರಯ್ಯ ಹೊಸಮಠ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಇದೇ ಸಂಧರ್ಭದಲ್ಲಿ 2024ರ ಹೊಸ ವರ್ಷದ ಕ್ಯಾಲೆಂಡರ್ ಲೋಕಾರ್ಪಣೆಗೊಳಿಸಲಾಯಿತು.

# ಎಫ್‌ಐಡಿ ಜೋಡಣೆ ಕುರಿತು ಜಾಗೃತಿ ಮೂಡಿಸಿ

▶▶ ಮೊದಲನೇ ಪುಟದಿಂದ

ಏಕೀಕೃತ ಸಾರ್ವಜನಿಕ ಕುಂದು-ಕೊರತೆಗಳ ನಿವಾರಣಾ ವ್ಯವಸ್ಥೆಯಡಿ ದಾಖಲಾಗುವ ದೂರುಗಳನ್ನು ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಕೂಡಲೇ ಅವುಗಳ ಕಡೆ ಗಮನ ಹರಿಸಿ ಕಾಲಮಿತಿಯೊಳಗಾಗಿ ಸಮಸ್ಯೆಗಳ ನಿವಾರಣೆಗೆ ಕ್ರಮ ವಹಿಸಬೇಕು. ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ ವ್ಯವಸ್ಥೆಯಡಿ ದಾಖಲಾಗುವ ದೂರುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸುತ್ತಿದ್ದು, ದೂರುಗಳ ನಿವಾರಣೆಯಲ್ಲಿ ಅಧಿಕಾರಿಗಳು ವಿಳಂಬ ಹಾಗೂ ಬೇಜವಾಬ್ದಾರಿತನವನ್ನು ತೋರಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರಲ್ಲದೆ, ಸಕಾಲದಡಿ ಸ್ವೀಕೃತವಾಗುವ ಅರ್ಜಿಗಳನ್ನು ಕಾಲಮಿತಿಯೊಳಗಾಗಿ ವಿಲೇ ಮಾಡಬೇಕು. ಸಕಾಲದಲ್ಲಿ ಕಂಡು ಬರುವ ತಾಂತ್ರಿಕ ದೋಷಗಳನ್ನು ಸಂಬಂಧಿಸಿದವರ ಗಮನಕ್ಕೆ ತಂದು, ಕೂಡಲೇ ಪರಿಹರಿಸಿಕೊಂಡು ಅರ್ಜಿಗಳ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಜಿ.ಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಮುಖ್ಯ ಯೋಜನಾಧಿಕಾರಿ ಎನ್.ಕೆ. ನಿರ್ಮಲಾ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಗಂಗಪ್ಪ.ಎಂ., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ರವಿ ಗುಂಜಿಕರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ಕರ್ನಾಟಕ ಸರಕಾರ
**ಸಹಾಯಕ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ ಶಿರಹಟ್ಟಿ**
**ದೂರವಾಣಿ ಸಂಖ್ಯೆ: 08487-295097 ಇ-ಮೇಲ್:tswosrt@gmail.com**
ಸಂ:ಸನಿಸಕಇ/ಶಿರಹಟ್ಟಿ/ಎಸ್-2/ಬಾವಾ/2023-24 ದಿನಾಂಕ: 29-11-2023

**ಟೆಂಡರ್ ಪ್ರಕಟಣೆ**

2023-24 ನೇ ಸಾಲಿಗಾಗಿ ಸರಕಾರಿ ಅಧಿಕೃತ ಕೆಲಸ ಕಾರ್ಯಗಳ ಅನುಷ್ಠಾನಕ್ಕಾಗಿ ಶಿರಹಟ್ಟಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಗೆ ಸುಸ್ಥಿತಿಯಲ್ಲಿರುವ ಹಾಗೂ ಚಾಲ್ತಿ ಕಾಗದ ಪತ್ರ ಹೊಂದಿರುವ (2022 ರ ಹಾಗೂ ಇತ್ತೀಚಿನ ವಿನ್ಯಾಸದ) (ಹವಾ ನಿಯಂತ್ರಣ ರಹಿತ ವಾಹನ- Non AC) ಟಾಟಾ ವಿಸ್ತಾ, ಬೊಲೇರೊ, ಎರಿಟಿಗಾ ಹಾಗೂ ಇತರೆ ಕಂಪನಿಯ ವಾಹನಗಳನ್ನು ತಿಂಗಳ ಬಾಡಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಒಂದು (ಎಕ) ಲಕೋಟೆ ವಿಧಾನದಲ್ಲಿ ಟೆಂಡರ ಆಹ್ವಾನಿಸಲಾಗಿದೆ ಆಸಕ್ತ ಟೆಂಡರದಾರರು ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಪ್ರವಾಸೋದ್ಯಮ ನಿಗಮಗಳಿಂದ ಸಹಾಯಧನದ ಮೂಲಕ ಪಡೆದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಾಹನಗಳ ಮಾಲಕರುಗಳಿಗೆ ಮೊದಲು ಆದ್ಯತೆ ಹಾಗೂ ಸ್ವಂತ ವಾಹನ ಹೊಂದಿದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಾಹನ ಮಾಲೀಕರಿಗೆ 2ನೇ ಅದ್ಯತೆ ಮೂಲಕ ಆಯ್ಕೆ ಮಾಡಲು ಅರ್ಜಿ ಅಹ್ವಾನಿಸಲಾಗಿದೆ. ಖಾಲಿ ಟೆಂಡರ್ ಫಾರಂಗಳನ್ನು ಪಡೆಯುವ ಕೊನೆಯ ದಿನಾಂಕ : **13/12/2023** ಸಂಜೆ 4:00 ಗಂಟೆಗೆ. ಸೀಲು ಮಾಡಿದ ಟೆಂಡರ್ ಫಾರಂಗಳನ್ನು ಪೆಟ್ಟಿಗೆಗೆ ಹಾಕುವ ಕೊನೆಯ ದಿನಾಂಕ : **13/12/2023** ಸಂಜೆ 4:00 ಗಂಟೆಗೆ. ಹಾಗೂ ಟೆಂಡರ್ ಪೆಟ್ಟಿಗೆಯನ್ನು ತೆರೆಯುವ ದಿನಾಂಕ : **14/12/2023** ಬೆಳಿಗ್ಗೆ 11:00 ಗಂಟೆಗೆ ಪ್ರತಿ ವಾಹನಕ್ಕೆ ಇ.ಎಂ.ಡಿ ಮೊತ್ತ ರೂ.**10,000=00** ಇದ್ದು ಟೆಂಡರ ಫಾರ್ಮ ಬೆಲೆ ರೂ **1500=00** ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : **08487-295097** ಗೆ ಸಂಪರ್ಕಿಸಲು ಕೋರಲಾಗಿದೆ.

ಸಹಿ/- **ಸಹಾಯಕ ನಿರ್ದೇಶಕರು**
ವಾಸಾಸಂಇ/ಗದಗ/ಕೆಎಸ್‌ಎಂಸಿಎ/331/2023-24 **ಸಮಾಜ ಕಲ್ಯಾಣ ಇಲಾಖೆ ಶಿರಹಟ್ಟಿ**

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗದಗ ಜಿಲ್ಲೆ, ಗದಗ**
**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಪುನರ್‌ನಿರ್ಮಾಣ ಕಾಯ್ದೆ 2013 ರ ಕಲಂ 11(1) ಮೇರೆಗೆ ಅಧಿಸೂಚನೆ.**

**ನಂ:ಎಲ್‌ಎಕ್ಯೂ:ಸಿಆರ್:26/2023-24** **ದಿನಾಂಕ: 18-11-2023**

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಗದಗ ತಾಲ್ಲೂಕು, ಗದಗ ಗ್ರಾಮದ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಗದಗ ಮೃಗಾಲಯವನ್ನು ವಿಸ್ತರಿಸಿ ಅಭಿವೃದ್ಧಿಪಡಿಸಲು ಭೂಸ್ವಾಧೀನ ಪಡಿಸಿಕೊಳ್ಳಬೇಕೆಂದು ಕರ್ನಾಟಕ ಸರ್ಕಾರದವರಿಗೆ ಕಂಡು ಬಂದಿದೆ.

ಕೇಂದ್ರ ಅಧಿನಿಯಮ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ ಕಲಂ 4ರಲ್ಲಿ ತಿಳಿಸಿರುವಂತೆ ಸಾಮಾಜಿಕ ಪರಿಣಾಮ ನಿರ್ಧರಣೆಯ ಅಧ್ಯಯನ ವರದಿ ತಯಾರಿಸಬೇಕಾಗಿರುತ್ತದೆ ಈ ಕುರಿತು ಕಾಯ್ದೆ ಕಲಂ 10ಎ ಹಾಗೂ ಸರಕಾರದ ಆದೇಶ ಸಂಖ್ಯೆ ಕಂಇ 20 ಎಕ್ಯೂಡಿ 2023 ದಿನಾಂಕ: 18-11-2023 ರಂತೆ ಸಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನ ವರದಿ ಮಾಡುವುದರಿಂದ ವಿನಾಯಿತಿ ನೀಡಿ ಅಧಿಸೂಚನೆ ಹೊರಡಿಸಲಾಗಿದೆ, ಹಾಗೂ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ) ನಿಯಮಾವಳಿ 2015 ರ ನಿಯಮ 2(ಸಿ) ರನ್ವಯ ಜಿಲ್ಲಾಧಿಕಾರಿಗಳ ಕಾರ್ಯಗಳನ್ನು ನಿರ್ವಹಿಸಲು ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿಗಳು ಗದಗ ಇವರನ್ನು ನೇಮಕ ಮಾಡಿರುತ್ತದೆ ಹಾಗೂ ಕಲಂ 43 ರ ಮೇರೆಗೆ ಹಾಗೂ ಸರಕಾರದ ಆದೇಶ ಸಂಖ್ಯೆ ಕಂಇ.56 ಭೂಸ್ವಾಬೆ 2014, ದಿನಾಂಕ:17-07-2014 ರಲ್ಲಿ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಅಧಿಕೃತ ಪ್ರಾಧಿಕಾರದ ಆಡಳಿತಾಧಿಕಾರಿಗಳಾಗಿ ಅಧಿಕಾರ ಚಲಾಯಿಸಲು ಅಪರ ಜಿಲ್ಲಾಧಿಕಾರಿಗಳು ಗದಗ ಇವರಿಗೆ ಅಧಿಕಾರ ನೀಡಲಾಗಿದೆ. ಭೂಸ್ವಾಧೀನಕ್ಕೆ ಒಳಪಡುವ ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರಗಳು ಈ ಕೆಳಗಿನ ಅನುಸೂಚಿಯಂತೆ ಇರುತ್ತದೆ.

ಈ ಪ್ರಕಟಣೆಯು ಕೇಂದ್ರದ ಅಧಿನಿಯಮ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ ಕಲಂ 11(1) ರಂತೆ ಹೊರಡಿಸಲಾಗಿದೆ. ಸರ್ಕಾರವು ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿಗಳು ಗದಗ ಹಾಗೂ ಇವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಕಲಂ 12 ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ನೀಡಿರುತ್ತದೆ.

ಕಲಂ 11(1) ಅಧಿಸೂಚನೆ ಪ್ರಕಟಣೆಯಲ್ಲಿ ಒಳಗೊಂಡ ಜಮೀನಿನ ಆಸಕ್ತಿಯುಳ್ಳವರು ಅಧಿಸೂಚನೆ ಪ್ರಕಟವಾದ 60 ದಿನಗಳೊಳಗಾಗಿ ಕಲಂ 15 ಮೇರೆಗೆ ತಮ್ಮ ಆಕ್ಷೇಪಣೆಗಳನ್ನು ಮಾಡುವುದಿದ್ದರೆ ಅಂತಹ ಆಕ್ಷೇಪಣೆಗಳನ್ನು ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿಗಳು ಗದಗ ಇವರಿಗೆ ಸಲ್ಲಿಸತಕ್ಕದ್ದು, ಅವಧಿ ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು ಗದಗ ಇವರ ಕಛೇರಿಯಲ್ಲಿ ಪರಿಶೀಲನೆಗೆ ಇಡಲಾಗಿದೆ.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಈ ಮೂಲಕ ತಿಳಿಸಲಾಗಿದೆ, ಕಲಂ 11(4) ರಲ್ಲಿ ತಿಳಿಸಿರುವಂತೆ ಸದರಿ ಸ್ವಾಧೀನ ಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೆ ಅಂತಿಮವಾಗಿ, ಸದರಿ ಕಾಯ್ದೆ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಅನುಸೂಚಿ**

ಜಿಲ್ಲೆ : ಗದಗ ತಾಲೂಕ : ಗದಗ ಹೋಬಳಿ : ಗದಗ ಗ್ರಾಮ : ಗದಗ

| ಅ. ನಂ | ಖಾತೆದಾರರ / ಅನುಭವದಾರರ ಹೆಸರು | ಸರ್ವೆ ನಂಬರು | ಜಮೀನಿನ ಒಟ್ಟು ವಿಸ್ತೀರ್ಣ | ಭೂಸ್ವಾಧೀನ ವಿಸ್ತೀರ್ಣ ಎ-ಗುಂ | ಜಮೀನಿನ ತರಹೆ | ಚೆಕಬಂದಿ ಪೂರ್ವ | ಚೆಕಬಂದಿ ಪಶ್ಚಿಮ | ಚೆಕಬಂದಿ ಉತ್ತರ | ಚೆಕಬಂದಿ ದಕ್ಷಿಣ | ಬೇಕಾದ ಅಂದಾಜು ಕ್ಷೇತ್ರ ಎ-ಗುಂ | ಆಕಾರ ರೂ.ಪೈ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 1.ಬೂದಿಹಾಳ ಶಿವಬಸಪ್ಪ ತಂ.ಶಿವಲಿಂಗಪ್ಪ<br>2.ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಾ.ಹೆ. ಸಂ. 63<br>3.ಮಲಪ್ರಭಾ ಬಲದಂಡೆ ಕಾಲುವೆ ಭೂಸ್ವಾಧೀನ | 266/4 | 4-29 | 00-05 | ಖುಷ್ಕಿ | ನಾಲಾ | ಹಳ್ಳವು | ರಿ.ಸ.ನಂ. 266/3 | ರಿ.ಸ.ನಂ. 266/5 | 00-05 | 4.29 |
| 2 | 1. ಬೂದಿಹಾಳ ಶಿವಬಸಪ್ಪ ತಂ.ಶಿವಲಿಂಗಪ್ಪ<br>2.ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಾ.ಹೆ. ಸಂ. 63<br>3.ಮಲಪ್ರಭಾ ಬಲದಂಡೆ ಕಾಲುವೆ ಭೂಸ್ವಾಧೀನ | 266/5 | 4-29 | 1-18 | ಖುಷ್ಕಿ | ರಸ್ತೆ (ರಾ.ಹೆ) | ಹಳ್ಳವು | ರಿ.ಸ.ನಂ. 266/4 | ರಿ.ಸ.ನಂ. 267 | 1-18 | 4.29 |
| 3 | 1.ಕಾರದಕಟ್ಟಿ ರಾಜಶೇಖರ ತಂ.ಚನ್ನವೀರಪ್ಪ<br>2.ಕಾರದಕಟ್ಟಿ ರಾಜಕುಮಾರ ತಂ.ಚನ್ನವೀರಪ್ಪ<br>3.ಕಾಳೆ ನೀಲವ್ವ ಕೋಂ.ಮಲ್ಲಪ್ಪ<br>4.ಖಮಿತ್ಕರ ಗಂಗವ್ವ ಕೋಂ. ರಾಮಚಂದ್ರಪ್ಪ<br>5.ಕಾರದಕಟ್ಟಿ ಮಧುಮತಿ ತಂ. ಚನ್ನವೀರಪ್ಪ | 267/1 | 2-12 | 2-12 | ಖುಷ್ಕಿ | ರಿ.ಸ.ನಂ. 267/3 | ಹಳ್ಳವು | ರಿ.ಸ.ನಂ. 266 | ರಿ.ಸ.ನಂ. 267/2 | 2-12 | 3.61 |
| 4 | ಕಾರದಕಟ್ಟಿ ಶಂಭುಲಿಂಗಪ್ಪ ವೀರಪ್ಪ | 267/2 | 4-24 | 4-04 | ಖುಷ್ಕಿ | ರಿ.ಸ.ನಂ.267/3, 267/4, 267/5 | ಹಳ್ಳವು | ರಿ.ಸ.ನಂ. 267/1 | ರಿ.ಸ.ನಂ. 270 | 4-04 | 7.23 |
| 5 | 1.ಅಮೃತ ತಂ. ಶಂಕರಸಾ ಪಟ್ಟಣ<br>2.ಬಾಕಳೆ ಗಜಾನನ ಅರವಿಂದ<br>3.ಹಬೀಬ ದೇವೆಂದ್ರಸಾ ಪರಶುರಾಮಸಾ | 267/3 | 1-11 | 0-33 | ಖುಷ್ಕಿ | ರಸ್ತೆ (ರಾ.ಹೆ) | ರಿ.ಸ.ನಂ. 267/1, 267/2 | ರಿ.ಸ.ನಂ. 266 | ರಿ.ಸ.ನಂ. 267/4 | 0-33 | 2.24 |
| 6 | 1.ಗಣೇಶ ವಿಶ್ವನಾಥಸಾ ಶಿದ್ಲಿಂಗ<br>2.ವಂದನಾ ಕೋಂ. ಗಣೇಶ ಶಿದ್ಲಿಂಗ<br>3.ಶ್ರೀಕಾಂತ ನಾರಾಯಣಸಾ ಲದವಾ<br>4.ವೈಶಾಲಿ ಕೋಂ. ಶ್ರೀಕಾಂತ ಲದವಾ | 267/4 | 2-09 | 2-03 | ಖುಷ್ಕಿ | ರಸ್ತೆ (ರಾ.ಹೆ) | ರಿ.ಸ.ನಂ. 267/2 | ರಿ.ಸ.ನಂ. 267/3 | ರಿ.ಸ.ನಂ. 267/5 | 2-03 | 3.31 |
| 7 | 1.ಪರಶುರಾಮ ತಂ. ಶಂಕರಸಾ ಖಟವಟೆ<br>2.ವಿನಾಯಕ ತಂ. ಅರುಣ ಖಟವಟೆ<br>3.ಸಾಗರ ತಂ. ಡೊಂಗರಸಾ ಪವಾರ<br>4.ಆನಂದ ತಂ. ಬಾಬಾಸಾ ಭಾಂಡಗೆ | 267/5 | 2-31 | 2-25 | ಖುಷ್ಕಿ | ರಸ್ತೆ (ರಾ.ಹೆ) | ರಿ.ಸ.ನಂ. 267/2 | ರಿ.ಸ.ನಂ. 267/4 | ರಿ.ಸ.ನಂ. 270 | 2-25 | 4.18 |
| | | ಒಟ್ಟು | **22-25** | **13-20** | | | | | | **13-20** | |

ಸಹಿ/-
**ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ, ಗದಗ**

ವಾ.ಸಾ.ಇ/ಗದಗ/325/2023-24/ದೇಶಪಾಂಡೆಪಬ್ಲಿಸಿಟಿ

ಸಹಿ/-
**ಜಿಲ್ಲಾಧಿಕಾರಿ, ಗದಗ**

ಜ. ರುದ್ರಮುನೀಶ್ವರ ವಸತಿ ಪ್ರೌಢಶಾಲೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ

# ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ



■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಧಾರ್ಮಿಕ ಕ್ಷೇತ್ರದಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರವೂ ಮಕ್ಕಳಿಗೆ ಸಿಗಬೇಕೆಂಬ ಲಿಂ.ಶ್ರೀ ರಂಭಾಪುರಿ ವೀರರುದ್ರಮುನಿ ಜಗದ್ಗುರುಗಳವರ ಸತ್ಯ ಸಂಕಲ್ಪ ಸಾಕಾರಗೊಂಡಿದೆ. ಇದೇ ಉದ್ದೇಶದಿಂದ ಪ್ರಾರಂಭಿಸಲ್ಪಟ್ಟ ಶಾಲೆ ಇಂದು ನೂತನ ಕಟ್ಟಡವನ್ನು ಹೊಂದಿ ಮಕ್ಕಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡುತ್ತಿದೆ. ಗ್ರಾಮೀಣ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕೆಂಬ ಗುರಿಯೊಂದಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ ಮುನ್ನಡೆಯುತ್ತಿರುವುದು ತಮಗೆ ಸಮಾಧಾನ ತಂದಿದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನದ ಶ್ರೀ ವೀರಭದ್ರಸ್ವಾಮಿ ವಸತಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀ ಜಗದ್ಗುರು ರುದ್ರಮುನೀಶ್ವರ ವಸತಿ ಪ್ರೌಢಶಾಲೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

> ನೂತನ ಶಾಲಾ ಕಟ್ಟಡ ಉದ್ಘಾಟಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ಶ್ರೀ ರಂಭಾಪುರಿ ಪೀಠ ಧಾರ್ಮಿಕತೆಯ ಜೊತೆಗೆ ಶಿಕ್ಷಣಕ್ಕೂ ಒತ್ತು ನೀಡುತ್ತಿರುವುದು ಅಭಿಮಾನದ ಸಂಗತಿ. ರಾಜ್ಯದಲ್ಲಿ 1 ಕೋಟಿ 25 ಲಕ್ಷ ಮಕ್ಕಳು ಓದುತ್ತಿದ್ದು ಅವರೆಲ್ಲರಿಗೂ ಉತ್ತಮ ಮಟ್ಟದ ಶಿಕ್ಷಣ ನೀಡಬೇಕೆಂಬುದು ತಮ್ಮ ಗುರಿಯಾಗಿದೆ. ಇಲಾಖೆಯಲ್ಲಿ ಹಲವು ಸಮಸ್ಯೆಗಳು ಇದ್ದು ಅವೆಲ್ಲವುಗಳನ್ನು ಸರಿಪಡಿಸಿ ಬದಲಾವಣೆ ತರುವ ಪ್ರಯತ್ನ ನಡೆದಿದೆ ಎಂದರು.

ಸಮಾರಂಭವನ್ನು ಉದ್ಘಾಟಿಸಿದ ಇಂಧನ ಖಾತೆ ಸಚಿವ ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ಮಾತನಾಡಿ, ಜಾತಿ-ಮತ-ಪಂಥ ಎನ್ನದೇ ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕೆನ್ನುವುದು ಸರ್ಕಾರದ ಗುರಿಯಾಗಿದ್ದು, ಅದಕ್ಕೆ ಪೂರಕವಾಗಿ ಶ್ರೀ ರಂಭಾಪುರಿ ಪೀಠ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಅ.ಭಾ.ವೀರಶೈವ ಶಿವಾಚಾರ್ಯ ಸಂಸ್ಥೆ ಗೌರವಾಧ್ಯಕ್ಷರಾದ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ಹಾಗೂ ಅಧ್ಯಕ್ಷರಾದ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಉಪದೇಶಾಮೃತ ನೀಡಿದರು.

ಹೂಲಿ ಶಿವಸಿದ್ಧರಾಮೇಶ್ವರ ಶಿವಾಚಾರ್ಯರು, ಸಂಗೊಳ್ಳಿ ಗುರುಲಿಂಗ ಶಿವಾಚಾರ್ಯರು ಹಾಗೂ ಸಿಂದಗಿ ಶ್ರೀಗಳು ಉಪಸ್ಥಿತರಿದ್ದರು.

ಅಧ್ಯಕ್ಷತೆ ವಹಿಸಿದ ಶಾಸಕ ಟಿ.ಡಿ. ರಾಜೇಗೌಡ, ಮಾಜಿ ಶಾಸಕ ಜಿ.ಎಸ್. ಗಡ್ಡದ್ದೇವರಮಠ, ಜಿ.ಪಂ ಮಾಜಿ ಉಪಾಧ್ಯಕ್ಷ ಎಂ.ಎಸ್. ಚನ್ನಕೇಶವ, ಸಾಮಾಜಿಕ ಕಾರ್ಯಕರ್ತರಾದ ಬಿ.ಸಿ. ಮುಂತಾದವರು ಪಾಲ್ಗೊಂಡಿದ್ದರು. ಎ.ವಿ.ಎಸ್. ಪ್ರೊಜೆಕ್ಟ್‌ನ ಗುತ್ತಿಗೆದಾರ ಬಾಳಯ್ಯ ಇಂಡಿಮಠ ಸೇರಿದಂತೆ ಹಲವಾರು ಗಣ್ಯರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆ ನೀಡಿ ಆಶೀರ್ವದಿಸಿದರು. ಶ್ರೀ ಪೀಠದ ಆಡಳಿತಾಧಿಕಾರಿ ಎಸ್.ಬಿ. ಹಿರೇಮಠ ಸ್ವಾಗತಿಸಿದರು. ವೇ.ಗಂಗಾಧರ ಶಾಸ್ತ್ರಿಗಳು ಭಕ್ತಿ ಗೀತೆ ಹಾಡಿದರು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು.

'ಜನತಾ ದರ್ಶನ'ದಲ್ಲಿ ಜನರ ಸಮಸ್ಯೆಗಳನ್ನು ಆಲಿಸಿದ ಸಚಿವ ಡಾ. ಹೆಚ್.ಸಿ. ಮಹದೇವಪ್ಪ

# ಎಲ್ಲಾ ತಾಲೂಕುಗಳಲ್ಲಿಯೂ 'ಜನ ಸ್ಪಂದನ'



■ವಿಜಯಸಾಕ್ಷಿ ಸುದ್ದಿ, ಮೈಸೂರು

ಆಡಳಿತ ಚುರುಕುಗೊಳಿಸಿ, ಜನಪರವಾದ ಆಡಳಿತದ ವಾತಾವರಣ ಸೃಷ್ಟಿಸಬೇಕು. ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು. ಸಂಕಷ್ಟದಲ್ಲಿರುವ ಜನರು ನೇರವಾಗಿ ಬಂದು ಭಾಗಿಯಾಗಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ 'ಜನತಾ ದರ್ಶನ' ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ನುಡಿದರು.

ಜಿಲ್ಲಾಡಳಿತದ ವತಿಯಿಂದ ಇಲ್ಲಿನ ವಿದ್ಯೋದಯ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 'ಜನತಾದರ್ಶನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಜಿಲ್ಲೆಗಳಲ್ಲಿ ಜನಸ್ಪಂದನ ಸಭೆ ನಡೆಸಬೇಕೆಂದು ಸೂಚನೆ ನೀಡಿದ್ದರು. ಅದರಂತೆ ಮೊದಲಿಗೆ ಮೈಸೂರಿನಲ್ಲಿ ಸಭೆ ನಡೆಸಿ, ಸ್ವೀಕರಿಸಿದ್ದ ಅಹವಾಲುಗಳಲ್ಲಿ ಶೇ.98ರಷ್ಟನ್ನು ಬಗೆಹರಿಸಲಾಗಿದೆ. ವಿಧಾನ ಸಭೆಯ ಚಳಿಗಾಲದ ಅಧಿವೇಶನ ಮುಗಿದ ಬಳಿಕ ಡಿ.15ರ ನಂತರ ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಜನಸ್ಪಂದನ ಕಾರ್ಯಕ್ರಮ ನಡೆಸಿ ಜನರ ಸಮಸ್ಯೆಗಳನ್ನು ಆಲಿಸಲಾಗುವುದು ಎಂದು ಹೇಳಿದರು.

> ತಾಲೂಕಿನಲ್ಲಿ ಸರ್ಕಾರದ ಮಹತ್ವದ 'ಗೃಹಲಕ್ಷ್ಮೀ' ಯೋಜನೆಯ ಫಲಾನುಭವಿಗಳ ಪೈಕಿ 528 ಮಹಿಳೆಯರ ಖಾತೆಗೆ ಹಣ ಬಂದಿಲ್ಲ ಎಂಬ ಮಾಹಿತಿ ಇದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಜೊತೆಗೆ ಈಗಾಗಲೇ ಚರ್ಚಿಸಿದ್ದೇನೆ. ಶೀಘ್ರದಲ್ಲೇ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಬರುವಂತೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಮುಖಂಡರು ಮಾತನಾಡಿ, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯು ಮೈಸೂರು ಹಾಗೂ ಚಾಮರಾಜನಗರ ಭಾಗದ ರೈತರಿಗೆ ಬಾಕಿ ಹಣ ನೀಡಿಲ್ಲ. ಸರ್ಕಾರದ ವತಿಯಿಂದ 150 ರೂ. ಹೆಚ್ಚುವರಿ ಹಣವನ್ನೂ ನೀಡಿಲ್ಲ. ಬರಗಾಲದಲ್ಲಿ ರೈತರ ಬೆಳೆ ನಾಶವಾಗಿದ್ದು, ಕನಿಷ್ಠ 25 ಸಾವಿರ ರೂ. ಬರ ಪರಿಹಾರ ನೀಡಬೇಕು. ವಿದ್ಯುತ್ ಸರಿಯಾಗಿ ಒದಗಿಸಬೇಕು ಎಂದು ಮನವಿ ಮಾಡಿದರು.

ಈ ಕುರಿತು ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಪ್ರತಿಕ್ರಿಯಿಸಿ, ರೈತರ ಎಲ್ಲಾ ಬೇಡಿಕೆಗಳ ಕುರಿತು ಜಿಲ್ಲಾಧಿಕಾರಿ ಹಾಗೂ ಸಂಬಂಧಿಸಿದ ಕಾರ್ಖಾನೆಯವರೊಂದಿಗೆ ಸಭೆ ನಡೆಸಿ ಚರ್ಚಿಸಲಾಗಿದೆ. ಜಿಲ್ಲೆಯ ರೈತರ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೂ ತರಲಾಗಿದೆ. ಈ ಎಲ್ಲಾ ವಿಚಾರಗಳನ್ನು ಸರ್ಕಾವು ಗಂಭೀರವಾಗಿ ಪರಿಗಣಿಸಿದ್ದು, ಸಮಸ್ಯೆ ಬಗೆಹರಿಸಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ನಂದಿನಿ, ತಹಸೀಲ್ದಾರ್ ಸುರೇಶಾಚಾರ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

# ವಿಕಲಚೇತನರ ಆರೋಗ್ಯ ತಪಾಸಣಾ ಶಿಬಿರ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಗ್ರಾಮ ಪಂಚಾಯಿತಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ವಿಕಲಚೇತನರ ಆರೋಗ್ಯ ತಪಾಸಣಾ ಶಿಬಿರ ನೆರವೇರಿತು.

ಅನ್ನದಾನೀಶ್ವರ ಸಭಾ ಭವನದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ವಹಿಸಿ ಮಾತನಾಡಿ, ವಿಕಲಚೇತನರನ್ನು ಸಮಾಜದಲ್ಲಿ ಗೌರಯುತವಾಗಿ ಕಾಣುವದರೊಂದಿಗೆ ಅವರ ಆರೋಗ್ಯ ಬಗ್ಗೆ ಕಾಳಜಿ ವಹಿಸಬೇಕು ಎಂದರು.

ಶಿಬಿರದಲ್ಲಿ ಭಾಗವಹಿಸಿದ ವಿಕಲಚೇತನರ ಆರೋಗ್ಯ ತಪಾಸಣೆ ಕೈಗೊಂಡ ಡಾ. ಅಮೃತ ಹರಿದಾಸರ ಆರೋಗ್ಯದ ಕುರಿತು ಸಲಹೆ-ಸೂಚನೆಗಳನ್ನು ನೀಡಿದರು. ಗ್ರಾ.ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ತಾಲೂಕು ಪುನರ್ವಸತಿ ಕಾರ್ಯಕರ್ತ ಖಾಜಾಹುಸೇನ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ರತ್ನಾ ಮುರಾರಿ, ಗ್ರಾ.ಪಂ ಸದಸ್ಯರು ಉಪಸ್ಥಿತರಿದ್ದರು.

# ಹರ್ಷ-ನಷ್ಟಗಳ ಮಿಶ್ರಫಲ ನೀಡಿದ ಅಕಾಲಿಕ ಮಳೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಕಳೆದ 4 ತಿಂಗಳಿಂದ ಹನಿ ಮಳೆಯೂ ಆಗದೇ ಬರಗಾಲದ ಸುಳಿಗೆ ಸಿಲುಕಿರುವ ರೈತ ಸಮುದಾಯಕ್ಕೆ ಮಂಗಳವಾರ ಸಂಜೆ ಸುರಿದ ರಭಸದ ಅಕಾಲಿಕ ಮಳೆ ಒಂದಷ್ಟು ಹರ್ಷವನ್ನುಂಟು ಮಾಡಿದ್ದರೆ, ಮತ್ತೊಂದೆಡೆ ನಷ್ಟಕ್ಕೆ ಸಿಲುಕಿಸಿದೆ.

ಸದ್ಯ ರೈತರು ಬರಗಾಲದ ನಡುವೆಯೇ ಕಷ್ಟಪಟ್ಟು ಉಳಿಸಿಕೊಂಡಿದ್ದ ಅಲ್ಪ ಪ್ರಮಾಣದ ಶೇಂಗಾ ಒಕ್ಕಲಿ, ಹತ್ತಿ ಬಿಡಿಸುವುದು, ಉಳ್ಳಾಗಡ್ಡಿ ಕೀಳುವುದು, ಮೆಣಸಿನಕಾಯಿ ಬಿಡಿಸುವುದು, ಹೊಟ್ಟು ಮೇವು ಸಂಗ್ರಹಣೆ ಕಾರ್ಯದಲ್ಲಿ ತೊಡಗಿದ್ದಾರೆ. ಏಕಾಏಕಿ ಸುರಿದ ಮಳೆಯಿಂದ ಅವುಗಳ ರಕ್ಷಣೆ ಮಾಡಿಕೊಳ್ಳಲಾಗಿದೇ ನಷ್ಟ ಅನುಭವಿಸುವ ಸ್ಥಿತಿ ನಿರ್ಮಾಣವಾಯಿತು.

ಹಿಂಗಾರಿನಲ್ಲಿ ಬಿತ್ತಿದ್ದ ಹೂವು ಬಿಟ್ಟಿರುವ ಕಡಲೆ ಬೆಳೆಯ ಉಳಿ ತೋಯುತ್ತಿದ್ದು, ತೆನೆ ಬಿಟ್ಟಿರುವ ಜೋಳದ ಬೆಳೆಗೂ ಕಂಟಕವಾಗಲಿದೆ. ಈ ನಡುವೆ ತಡವಾಗಿ ಬಿತ್ತನೆ ಮಾಡಿದ್ದ, ಇನ್ನು ಮುಂದೆಯೂ ಬಿತ್ತನೆಗೆ ಧೈರ್ಯ ಮಾಡುವ ರೈತರಿಗೆ ಒಂದಷ್ಟು ಅನಕೂಲವಾಗಬಹುದು. ಅರ್ಧ ಗಂಟೆಗೂ ಹೆಚ್ಚುಕಾಲ ಸುರಿದ ರಭಸದ ಮಳೆಗೆ ಧೂಳುನಿಂದ ಕೂಡಿದ್ದ ರಸ್ತೆಗಳು, ಗಬ್ಬು ವಾಸನೆ ಬೀರುತ್ತಿದ್ದ ಚರಂಡಿಗಳು ತುಂಬಿ ಹರಿದು ಸ್ವಚ್ಛಗೊಂಡವು.

# ಅತಿಥಿ ಉಪನ್ಯಾಸಕರ ಬೇಡಿಕೆ ಸರಕಾರದ ಗಮನಕ್ಕಿದೆ: ಹಿಟ್ನಾಳ



■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಅತಿಥಿ ಉಪನ್ಯಾಸಕರ ಬೇಡಿಕೆಗಳು ಸರಕಾರದ ಗಮನಕ್ಕಿದೆ. ಈಗಾಗಲೇ ಪ್ರಣಾಳಿಕೆಯಲ್ಲಿಯೇ ಕಾಂಗ್ರೆಸ್ ಈ ಬಗ್ಗೆ ತಿಳಿಸಿದ್ದು ಆತಂಕ ಪಡಬೇಕಿಲ್ಲ ಎಂದು ಕಾಂಗ್ರೆಸ್ ಮುಖಂಡ ರಾಜಶೇಖರ ಹಿಟ್ನಾಳ ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಸೇವಾ ಕಾಯಂಗೆ ಆಗ್ರಹಿಸಿ ಅತಿಥಿ ಉಪನ್ಯಾಸಕರ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ಬುಧವಾರ ಆಗಮಿಸಿ ಅವರು ಮಾತನಾಡಿದರು.

ಅತಿಥಿ ಉಪನ್ಯಾಸಕರೊಂದಿಗೆ ಕೆಲ ಕಾಲ ಧರಣಿ ನಡೆಸಿದ ಅವರು ಮನವಿ ಸ್ವೀಕರಿಸಿ, ಕಾಲೇಜುಗಳು ಇಂದು ನಡೆಯುತ್ತಿರುವುದೇ ಅತಿಥಿ ಉಪನ್ಯಾಸಕರ ಸೇವೆಯಿಂದ. ನಿಮ್ಮ ಬಹುದಿನಗಳ ಬೇಡಿಕೆ ಕುರಿತು ಸರಕಾರ, ಕೊಪ್ಪಳ ಶಾಸಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಮಾತನಾಡಿ ಅಧಿವೇಶನದಲ್ಲಿ ಚರ್ಚಿಸುವಂತೆ ಮೌಖಿಕವಾಗಿಯೂ, ಲಿಖಿತ ವಾಗಿಯೂ ತಿಳಿಸುವುದಾಗಿ ಅವರು ಭರವಸೆ ನೀಡಿದರು.

ಜಿಲ್ಲೆಯ ವಿವಿಧ ತಾಲಕುಗಳ ಗ್ರಾಮೀಣ ಭಾಗದ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ಧರಣಿಯಲ್ಲಿ ಪಾಲ್ಗೊಂಡರು. ಕಾಲೇಜು ಅಭಿವೃದ್ಧಿ ಸಮಿತಿ ಮುಖಂಡ ಮಂಜುನಾಥ ಗೊಂಡಬಾಳ ಅವರು ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ರಾಜಶೇಖರ ಹಿಟ್ನಾಳ ಅವರ ಗಮನಕ್ಕೆ ತಂದರು. ಅತಿಥಿ ಉಪನ್ಯಾಸಕರಾದ ಪ್ರಕಾಶ್ ಬಳ್ಳಾರಿ ನಿರೂಪಿಸಿದರರ, ಬಸವರಾಜ ಕರುಗಲ್ ವಂದಿಸಿದರು.

ಈ ಸಂದರ್ಭದಲ್ಲಿ ಶಿವರಾಜ್ ಅರಸ್, ಮಹೇಶ್ ಕುಮಾರ್ ಜಿ, ಸಂತೋಷ್ ಅವಧ, ಶ್ರೀಮತಿ ರತ್ನ, ಡಾ ಗಂಗಮ್ಮ, ಶಿವಪ್ರಸಾದ್ ಹಾದಿಮನಿ, ವೀರೇಶ್ (ವಿರೂಪಾಕ್ಷ) ಮುತ್ತಾಳ, ಉಮೇಶ್ ಕಾತರಕಿ, ಶಿ ಕಾ ಬಡಿಗೇರ್, ನವೀನ್ ಎಂ, ಗವಿಸಿದ್ದಪ್ಪ, ವಸಂತ್ ಸಿಂಗಾಡಿ, ಶಿವಗಂಗಾ, ಸಾವಿತ್ರಿ ಕಣವಿ, ಎಚ್ ಕೆ ನೆರೆಗಲ್, ಮೆಹಬೂಬ್ ಬಾಷಾ, ಬಾಬುಸಾಬ್, ವಿದ್ಯಾ ಮುಳುಗುಂದ, ಗಿರಿಜಾ, ವೀಣಾ ಗಡ್ಡಮ್, ಸಖುಭಾಯಿ ಕಬಾಡಿ, ಹುಸೇನ್ ಸಾಬ್, ಅಣ್ಣಪ್ಪ ಪೂಜಾರ್, ದೇವರಾಜ್, ಲಕ್ಷ್ಮಣ ಪೂಜಾರ್, ರಾಘವೇಂದ್ರ ಪತ್ತಾರ್, ವೀರೇಶ್ ಡಿ, ರಾಘವೇಂದ್ರ ಪತ್ತಾರ, ಸೈಯದ್ ಜಾಫರ್, ಲಕ್ಷ್ಮಣ ಪೂಜಾರ್. ಡಾ. ನಂಜುಂಡಯ್ಯ ಮತ್ತಿತರರು ಇದ್ದರು.

# ಸಂವಿಧಾನ ರಕ್ಷಣೆ ನಮ್ಮೆಲ್ಲರ ಹೊಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಸಂವಿಧಾನ ಎಲ್ಲ ದೇಶದ ಸಂವಿಧಾನಕ್ಕಿಂತಲೂ ಬಹಳ ಮಹತ್ವದ್ದಾಗಿದೆ ಅದನ್ನು ರಕ್ಷಿಸುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಹೇಳಿದರು.

ನಗರದ ತೋಂಟದಾರ್ಯ ಮಠದ ಆವರಣದಲ್ಲಿ ಗದಗ ಜಿಲ್ಲಾ ಸ್ವಾಭಿಮಾನಿ ಛಲವಾದಿ ಮಹಾಸಭಾ ವತಿಯಿಂದ ಹಮ್ಮಿಕೊಂಡಿದ್ದ ಭೀಮರಥಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು. ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ್ ದಾಸ್ ಮಾತನಾಡಿ, ದೇಶದ ಎಲ್ಲ ವರ್ಗದ ಜನರಿಗೂ ಜನಸಂಖ್ಯೆಯಾಧಾರದ ಮೇಲೆ ಮೀಸಲಾತಿ ಕಲ್ಪಿಸಲಾಗಿದೆ. ಅವುಗಳನ್ನು ಬಳಸಿಕೊಂಡು ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಮುಂದೆ ಬರಬೇಕೆಂದರು.

ಜಿಲ್ಲಾ ಛಲವಾದಿ ಮಹಾಸಭಾದ ಗೌರವ ಕಾರ್ಯದರ್ಶಿ ಸುರೇಶ ಚಲವಾದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದ ಸಾನ್ನಿಧ್ಯವನ್ನು ತೋಂಟದ ಶ್ರೀ ಸಿದ್ದರಾಮ ಶ್ರೀಗಳು ವಹಿಸಿಕೊಂಡಿದ್ದರು. ಅಧ್ಯಕ್ಷತೆಯನ್ನು ಛಲವಾದಿ ಮಹಾಸಭಾದ ಅಧ್ಯಕ್ಷ ಎಲ್.ನಾರಾಯಣ ಸ್ವಾಮಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತೋಂದಾರ್ಯಮಠದ ಆಡಳಿತಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟಿ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ಸಿದ್ದಪ್ಪ ಲಿಂಗಧಾಳ, ಡಿಎಸ್ಎಸ್ ಸಂಚಾಲಕ ಪ್ರಕಾಶ ಕೆಲೂರ, ರಮೆಶ ಬಾಳಮ್ಮನವರ, ಸತೀಶ ಹೂಲಿ, ರವಿ ಕರಬಸಣ್ಣವರ ಕುಚಬಾಳ, ವಿಜಯ ಮುಳಗುಂದ, ದೇವಪ್ಪ ಲಿಂಗದಾಳ, ಬಸವರಾಜ ಸತ್ಯಮ್ಮನವರ, ಮಂಜುನಾಥ ಚಲವಾದಿ, ಮಹಾಂತೇಶ ಮದ್ನೂರ, ಮಾಂತೇಶ ಬಾಳಮ್ಮನವರ, ಲೋಹಿತ್ ಬಿಳೆಯಲಿ, ಹನಮಂತ ಚಲವಾದಿ, ನಾಗರಾಜ ಗೋಕಾವಿ, ಕರಿಯಪ್ಪ ಕಾಳಿ, ಸೈಯ್ಯದ ಹುಣಸಿಮರದ, ಸಂತೋಷ ಬಣಕಾರ, ರಮೇಶ ಸಾಗರ, ಬಸಪ್ಪ ಸಣ್ಣಕ್ಕಿ, ಮಂಜುನಾಥ ಪೂಜಾರ, ಮೈಲಾರಪ್ಪ ಸಗರ, ಮಂಜುನಾಥ ಲಿಂಗದಾಳ, ಪುನೀತ ತಮ್ಮಣ್ಣವರ, ಬಸವರಾಜ ಬಿನ್ನಾಳ, ಹೆಚ್.ವಾಯ್. ಕರಬಸಣ್ಣವರ, ವಿಜಯಲಕ್ಷ್ಮಿ ಚಲವಾದಿ ಪಾಲ್ಗೊಂಡಿದ್ದರು.

ರಮೇಶ ಕಡಿಯವರ, ಹನಮಂತ ಚಲವಾದಿ, ಅಶೋಕ ತಾಳದವರ, ಮನೋಹರ ಸಿಂಗಾಡಿ, ಶಿವಪ್ಪ ದೊಡ್ಡಮನಿ, ಬಸವರಾಜ ಗಾಡಗೋಳಿ ಮುಂತಾದವರು ಉಪಸ್ಥಿತರಿದ್ದರು.

# ಸಂವಿಧಾನ ಅರಿತು ದೇಶಾಭಿಮಾನಿಗಳಾಗಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ವಿದ್ಯಾರ್ಥಿಗಳು ಡಾ. ಬಿ.ಆರ್. ಅಂಬೇಡಕರರು ದೇಶಕ್ಕೆ ನೀಡಿದ ಸಂವಿಧಾನವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಸಂವಿಧಾನದಲ್ಲಿರುವ ಹಕ್ಕು ಮತ್ತು ಕರ್ತವ್ಯಗಳ ಮೂಲಕ ದೇಶವನ್ನು ಕಟ್ಟಲು ಮುಂದಾಗಬೇಕೆಂದು ಸಾಹಿತಿ, ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಕಿವಿಮಾತು ಹೇಳಿದರು.

ಪಟ್ಟಣದ ಎಸ್.ಎ ಪದವಿಪೂರ್ವ ಮಹಾವಿದ್ಯಾಲಯದಲ್ಲಿ 'ಸಂವಿಧಾನ ಓದು' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶ ಸ್ವಾತಂತ್ರ್ಯವಾದ ನಂತರ ನಮ್ಮ ಸಂವಿಧಾನವನ್ನು ನಾವೇ ರಚಿಸಿಕೊಂಡು, ಅದನ್ನು ಒಪ್ಪಿಕೊಂಡ ದಿನವನ್ನು ಸಂವಿಧಾನ ದಿನವೆಂದು ಆಚರಿಸುತ್ತಿದ್ದೇವೆ. ಇಂದು ಸಂವಿಧಾನದ ಪೀಠಿಕೆಯನ್ನು ನೀವೆಲ್ಲರೂ ಓದಿದ್ದೀರಿ. ಮುಂದೆ ಅವಕಾಶ ದೊರೆತಾಗ ಸಂವಿಧಾನದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳಲು ನೀವೆಲ್ಲರೂ ಪ್ರಯತ್ನಿಸಬೇಕೆಂದು ತಿಳಿಸಿದರು.

ಪ್ರಾಚಾರ್ಯ ವೈ.ಸಿ. ಪಾಟೀಲ ಮಾತನಾಡಿ, ಈಗಿನಿಂದಲೇ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಸಂವಿಧಾನದ ಪರಿಚಯವನ್ನು ಮಾಡಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ನೀವು ರಾಜಕಾರಣಿಗಳಾದರೆ ತಪ್ಪೇನಿಲ್ಲ. ಆದರೆ ಕೆಟ್ಟ ರಾಜಕಾರಣಿಗಳಾಗಿ ರಾಜಕೀಯವನ್ನು ಕಲುಷಿತ ಮಾಡಲು ನೀವು ಮುಂದಾದರೆ ನಮಗೆ ನೋವಾಗುತ್ತದೆ ಎಂದರು.

ಈ ಬಾರಿಯ ರಾಜ್ಯ ಮಟ್ಟದ ಅಣಕು ಸಂಸತ್ತನ್ನು ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಡಿ.ಸಿ ವೈಶಾಲಿ ಎಂ.ಎಲ್ ಅವರ ಮಾರ್ಗದರ್ಶನದಲ್ಲಿ, ನಮ್ಮ ಕಾಲೇಜಿನಲ್ಲಿ ನಿರ್ವಹಿಸಿದ ಹೆಮ್ಮೆ ನಮ್ಮ ಸಂಸ್ಥೆಗಿದೆ.

ಅದಕ್ಕಾಗಿ ಕಾರಣರಾದ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ ಎಂದರು. ಕಾರ್ಯಕ್ರಮದಲ್ಲಿ ಬೀಚಿ ಬಳಗದ ಕೋಶಾಧ್ಯಕ್ಷ ಶಿವಯೋಗಿ ಜಕ್ಕಲಿ, ಕಾಲೇಜಿನ ಎಲ್ಲ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

# ರೈತರ ಬೆವರ ಹನಿಗೆ ಬೆಲೆ ಇದ್ದೇ ಇದೆ



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಕೃಷಿಯೆಂದರೆ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಎಲ್ಲಿಲ್ಲದ ಪ್ರೀತಿ. ಅವರ ಹುಬ್ಬಳ್ಳಿಯಲ್ಲಿರುವ ನಿಸರ್ಗ ಫಾರ್ಮ್‌ನಲ್ಲಿ ಕೃಷಿ ಕಾರ್ಮಿಕರೊಂದಿಗೆ ಭೋಜನ ಸವಿದು, ಅವರಿಗೆ ವಿಶೇಷ ಉಡುಗೊರೆ ನೀಡಿ ಹೊಸ ಬಟ್ಟೆ ವಿತರಿಸಿದರು.

ಎಲ್ಲ ಕುಟುಂಬಗಳ ಯೋಗಕ್ಷೇಮ ವಿಚಾರಿಸಿದ ಹೊರಟ್ಟಿಯವರು, ಆತ್ಮವಿಶ್ವಾಸ ತುಂಬಿದರು. 25ಕ್ಕೂ ಹೆಚ್ಚು ಕುಟುಂಬಗಳ ಸದಸ್ಯರಿಗೆ ಅವಶ್ಯಕ ಪರಿಕರಗಳ ಜೊತೆಗೆ ವಿಶೇಷ ಬಟ್ಟೆಗಳನ್ನು ನೀಡಿ ಮಾತನಾಡಿದ ಹೊರಟ್ಟಿ, ನನಗೆ ಹೊರಗಡೆ ಸಾಕಷ್ಟು ಸೌಲಭ್ಯ, ಖುಷಿ ಸಿಕ್ಕರೂ ನನ್ನ ತೋಟದಲ್ಲಿ ನನ್ನ ಕೃಷಿ ಕಾರ್ಮಿಕ ಕುಟುಂಬದ ಜೊತೆ ಕಾಲ ಕಳೆಯುವುದೆಂದರೆ ನನಗೆ ಎಲ್ಲಿಲ್ಲದ ಪ್ರೀತಿ. ಇಲ್ಲಿ ಸಿಕ್ಕಷ್ಟು ಖುಷಿ, ನೆಮ್ಮದಿ ನನಗೆ ಮತ್ತೆಲ್ಲೂ ಸಿಗುವುದಿಲ್ಲ. ಅವರು ಸುರಿಸಿದ ಬೆವರಿನ ಹನಿಗೆ ಇಲ್ಲಿ ಬೆಲೆ ಇದ್ದೇ ಇದೆ. ಹೀಗಾಗಿ ನಾನು ಅವರೊಂದಿಗೆ ಒಂದೇ ಕುಟುಂಬದ ಸದಸ್ಯರಂತೆ ಇದ್ದೇವೆ ಎಂದು ನುಡಿದರು.

ಈ ಸಂದರ್ಭದಲ್ಲಿ ಡಾ. ಬಸವರಾಜ್ ಧಾರವಾಡ, ವಿಜಯ್ ಹಬೀಬ್, ಪ್ರಕಾಶ ಹಬೀಬ್, ಸುನೀಲ್ ವರ್ಣೇಕರ್, ಮನೀಶ್ ಹುಚ್ಚಣ್ಣವರ್, ಮುರಳಿ ಹುಚ್ಚಣ್ಣವರ, ಬಸವರಾಜ್ ಸುರಗೊಂಡ ಸೇರಿದಂತೆ ಬಸವರಾಜ್ ಹೊರಟ್ಟಿ ಅವರ ಕಚೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka